॥ [१]श्रीवादिराजतीर्थानामृजुत्वे पुराणवचनानि ॥

तथाहि ब्रह्मवैवर्ते चतुर्मुखवचनम् –

'व्याससेवारतो नित्यं वादिराजो ऋजुर्यतिः ।
दुर्वादान् परिमथ्याशु मत्पदं यातुमर्हति ।
स्थापयिष्यति मच्छास्त्रं तेन क्षेमो भवेद्धि वः ॥' इति ।

ಭಾವಾರ್ಥ - ''ನಿರಂತರ ಶ್ರೀವೇದವ್ಯಾಸದೇವರ ಸೇವಾನಿರತರಾದ, ಋಜುಗಣಸ್ಥರಾದ ಶ್ರೀವಾದಿರಾಜಯತಿಗಳು ಸಕಲದುರ್ಮತಗಳನ್ನು ನಿರಾಕರಣೆ ಮಾಡಿ ನನ್ನ ಪದವಿಯನ್ನು ಹೊಂದುತ್ತಾರೆ. (ಲಾತವ್ಯಾಚಾರ್ಯರಾದ) ಶ್ರೀವಾದಿರಾಜರು ಶ್ರೀಮಧ್ವದೇವಕೃತಸಚ್ಛಾಸ್ತ್ರವನ್ನು ಸಂಸ್ಥಾಪಿಸುತ್ತಾರೆ. ಆದರಿಂದ ಸಕಲಸಾತ್ವಿಕಲೋಕಕ್ಕೆ ಕ್ಷೇಮವುಂಟಾಗುತ್ತದೆ.'' ಎಂದು ಚತುರ್ಮುಖಬ್ರಹ್ಮದೇವರು ಬ್ರಹ್ಮವೈವರ್ತಪುರಾಣದಲ್ಲಿ ಅಪ್ಪಣೆ ಕೊಟ್ಟಿರುತ್ತಾರೆ.

तथा हि पाद्मपुराणम् –

'ज्ञानी मध्वो मातरिश्वा गुहासन्तं जगत्पतिम् ।
हनुमद्भीममध्वाख्यास्त्रयो वायुसुता इमे ॥

तं मध्वं मारुतं सर्वे परिवारतया सदा ।
संसेवितुं सुरा भूमाववतीर्णा इति श्रुतम् ॥

ते तु तच्छिष्यतामाप्य तन्मतं तु व्यघोषयन् ।
येषु मुख्यौ विष्णुतीर्थपद्मनाभाख्ययोगिनौ ॥

अत्यक्तदेहस्तत्राद्यस्तन्मतं वर्तयिष्यति ।
तत्पूर्वमस्य वंशे तु ऋजुस्थो हि सुरेश्वरः ।
वादिराजो यतिर्भूत्वा चैतद्विस्तारयिष्यति ॥' इति ।

---

1. These outstanding Authorities have been quoted and published by उडुपि अष्टमठाधिपतिगळु nearly two-hundred years ago.

ಭಾವಾರ್ಥ - ಮಾತರಿಶ್ವರೂ ಜ್ಞಾನಿಶ್ರೇಷ್ಠರೂ ಆದ ಶ್ರೀಮಧ್ವಾಚಾರ್ಯರು ವೇದಗಳಲ್ಲಿ ಪ್ರತಿಪಾದಿಸಲ್ಪಡುತ್ತಾರೆ. ಅವರು ಜಗತ್ಪತಿಯಾದ (ಜೀವರ ಹೃದಯ-ಗುಹೆಗಳಲ್ಲಿರುವ) ಶ್ರೀವಿಷ್ಣುವನ್ನು ಪ್ರತಿಪಾದಿಸುತ್ತಾರೆ. ಹನುಮಭೀಮಮಧ್ವರೆಂದು ಶ್ರೀವಾಯುದೇವರ ಮೂರು ಅವತಾರಗಳು. ಅಂತಹ ಶ್ರೀಮಧ್ವದೇವರನ್ನು ಸಂಸೇವಿಸಲು (ಪರಿವಾರತ್ವೇನ ಸೇವಿಸಲು) ದೇವತೆಗಳು ಅವತರಿಸಿದರೆಂದು ಪ್ರಸಿದ್ಧವಾಗಿದೆ. ಅವರಾದರೋ ಶ್ರೀಮಧ್ವಶಿಷ್ಯರಾಗಿ ಶ್ರೀಮಧ್ವಮತವನ್ನು ಪ್ರಸಾರ ಮಾಡಿದರು. ಅವರಲ್ಲಿ ಮುಖ್ಯರು ಶ್ರೀವಿಷ್ಣುತೀರ್ಥರು ಮತ್ತು ಶ್ರೀಪದ್ಮನಾಭ-ತೀರ್ಥರು. ಇವರಲ್ಲಿ ಮೊದಲಿಗರಾದ ಶ್ರೀವಿಷ್ಣುತೀರ್ಥರು ಅತ್ಯಕ್ತದೇಹವುಳ್ಳವರಾಗಿ (ಶರೀರವನ್ನು ತ್ಯಾಗಮಾಡದೆ) ಶ್ರೀಮಧ್ವಮತವನ್ನು ಪುನರುದ್ಧರಿಸುತ್ತಾರೆ. ಅಂತಹ ಋಜುಪುಂಗವರಾದ ಶ್ರೀವಿಷ್ಣುತೀರ್ಥರ ಸದ್ವಂಶದಲ್ಲಿ ಋಜುಗಣಸ್ಥರೂ, ಸುರೇಶ್ವರರೂ ಆದ ಶ್ರೀವಾದಿರಾಜತೀರ್ಥರು ಅವತರಿಸಿ ಶ್ರೀಮಧ್ವಮತವನ್ನು ವಿಸ್ತಾರಗೊಳಿಸುತ್ತಾರೆ.'' ಎಂದು ಪಾದ್ಮಪುರಾಣದಲ್ಲಿ ಶ್ರೀವೇದವ್ಯಾಸದೇವರ ಅಪ್ಪಣೆ ಇದೆ.

तथा हि स्कान्दपुराणम् –
'विशुद्धपाजकक्षेत्रे ह्यनन्तेश्वरपूजकः ।
भविष्यति विशुद्धात्मा ब्राह्मणो व्रतनिष्ठितः ॥

वेदवत्याख्यभार्यायां तस्माज्जातो जगत्पतिः ।
यदुपुत्र्यां यथा भीमः सञ्जातः स्पर्शमात्रतः ॥

अज्ञदृष्ट्या शरीरं तु जातवद् दृश्यते बहिः ।
द्विषोडशीलक्षणकं शरीरं च तदेव हि ॥

लातव्यस्य ऋजोस्तस्य क्लृप्तं प्रतियुगेयुगे ।
वायोः प्रवेशपर्यन्तमत्र स्थित्वाऽथ गच्छति ॥

इदं शरीरं सम्प्राप्य लातव्यो वायुतामियात् ।
ततः कालान्तरे सोऽपि वादिराजो भविष्यति ॥

रजोऽधिकेन सत्त्वेन निर्मितं तच्छरीरकम् ।
शुक्लादिभिः प्रजातं तु कदाऽपि न भविष्यति ॥' इति ।

ಭಾವಾರ್ಥ - ಸ್ಕಾಂದಪುರಾಣದಲ್ಲಿ ಶ್ರೀವೇದವ್ಯಾಸದೇವರು ಶ್ರೀವಾದಿರಾಜರ ಅವತಾರದ ಬಗ್ಗೆ ಹೀಗೆ ಅಪ್ಪಣೆ ಕೊಟ್ಟಿದ್ದಾರೆ -

''ಪರಮಪವಿತ್ರವಾದ ಪಾಜಕಕ್ಷೇತ್ರದಲ್ಲಿ ಅನಂತೇಶ್ವರಪೂಜಕನಾಗಿ ಒಬ್ಬ ಪರಮಪೂತಾಂತರಂಗನೂ, ವ್ರತನಿಷ್ಠನೂ ಆದ ಬ್ರಾಹ್ಮಣೋತ್ತಮನೊಬ್ಬನು ಹುಟ್ಟುತ್ತಾನೆ. ಅಂತಹ ಭೂಸುರನ ಪತ್ನಿಯಾದ ವೇದವತಿದೇವಿಯ ಗರ್ಭದಲ್ಲಿ ಶ್ರೀಮಧ್ವದೇವರು ಹೇಗೆ ಯದುಪುತ್ರಿಯಲ್ಲಿ ಸ್ಪರ್ಶಮಾತ್ರದಿಂದ ಭೀಮಸೇನದೇವರು ಪ್ರಾದುರ್ಭೂತರಾದರೋ ಹಾಗೆ ಪ್ರಾದುರ್ಭೂತನಾಗುವರು. ಗರ್ಭವಾಸದುಃಖ-ರಹಿತರು ಶ್ರೀಮುಖ್ಯಪ್ರಾಣದೇವರು. ಅಜ್ಞದೃಷ್ಟಿಯಿಂದ (ಸಾಮಾನ್ಯರಿಗೆ) ಗರ್ಭದಿಂದ ಹುಟ್ಟಿದಂತೆ ಕಾಣುವರು. ಮೂವತ್ತೆರಡು ಸಲ್ಲಕ್ಷಣಗಳುಳ್ಳ ದೇಹವನ್ನು ಹೊಂದಿದವರು. ಲಾತವ್ಯನಾಮಕ ಋಜುದೇವತೆಗಳ ಅವತಾರವೂ ಸಮರ್ಥವಾಗಿ ಪ್ರತಿಯುಗದಲ್ಲಿ ವಾಯುದೇವರಂತೆ ಆಗುವುದು. ವಾಯುಪ್ರವೇಶಾತ್ಪೂರ್ವದವರೆಗೆ ಈ ಶರೀರದಲ್ಲಿದ್ದು ಹೋಗುವರು. ಲಾತವ್ಯಾಚಾರ್ಯರಾದರೋ ಮೂವತ್ತೆರಡು ಲಕ್ಷಣವುಳ್ಳ ದಿವ್ಯದೇಹವುಳ್ಳವರಾಗಿ ಸಾಧನೆ ಮಾಡಿ ವಾಯುಪದವಿಯನ್ನು ಹೊಂದುವರು. ಕಾಲಾಂತರದಲ್ಲಿ ಅವರು ವಾದಿರಾಜತೀರ್ಥನಾಮಕರಾಗಿ ಅವತರಿಸುವರು. ಅವರ ದೇಹವು ಸುತರಾಂ ಶುಕ್ಲಶೋಣಿತರಹಿತವಾಗಿದ್ದು ರಜೋ-ಧಿಕವಾದ ಸತ್ತ್ವಗುಣದಿಂದ ನಿರ್ಮಿತವಾದುದು''.

तथा हि वामनपुराणम् –

'अपरोक्षविशेषेण संयुता ब्रह्मपूर्वकाः ।
कल्क्यन्ता ऋजवः प्रोक्ता प्रारब्धफलभोगिनः ॥

ब्रह्मणो नावतारोऽस्ति शतमध्ये पराज्ञया ।
वायुमारभ्य कल्क्यन्ता जनिमन्तोऽत्र भारते ॥

हनुमद्भीममध्वाख्यरूपो वायुर्भविष्यति ।
स्वयंवरसमुद्योगे रुग्मिणीपत्रमादरात् ॥

कृष्णायादाद् गृहीत्वा यो ह्यन्तः पुरगतो द्विजः ।
सर्वादृष्टस्तदैवायम् ऋजुर्लातव्यनामकः ॥

वायुस्थानसमारोहयोग्योऽयं यतिरूपवान् ।
आकल्पं ब्रह्मणः कृष्णप्रसादस्यैकभाजनम् ॥

कृष्णार्चको यतिर्भूत्वा वादिराजो वदिष्यति ।
श्रीरुग्मिणीशविजयं कलौ कृष्णप्रसादभाक् ॥' इति ।

ಭಾವಾರ್ಥ - ''ಅಪರೋಕ್ಷವಿಶೇಷದಿಂದ ಯುಕ್ತರಾದ ಬ್ರಹ್ಮಮೊದಲಾದ ಕಲ್ಕಿಪರ್ಯಂತರಾದ ಋಜುಗಳು ಪ್ರಾರಬ್ಧಕರ್ಮಭೋಗಿಗಳಾಗಿರುತ್ತಾರೆ. ಈ ನೂರುಜನ ಋಜುಗಳಲ್ಲಿ ಬ್ರಹ್ಮದೇವರೊಬ್ಬರಿಗೆ ಮಾತ್ರ ಶ್ರೀಹರಿಯ ಆಜ್ಞೆಯಿಂದ ಅವತಾರವಿಲ್ಲ. ಮಿಕ್ಕ ವಾಯುದೇವರಿಂದಾರಂಭಿಸಿ ಕಲ್ಕಿಪರ್ಯಂತರಾದ ಋಜುಗಳು ಸಾಧನಾಭೂಮಿಯಾದ ಭರತಖಂಡದಲ್ಲಿ ಅವತರಿಸುತ್ತಾರೆ. ಶ್ರೀಮುಖ್ಯಪ್ರಾಣ-ರಾದರೋ ಹನುಮದ್ಭೀಮಮಧ್ವಾಖ್ಯ ಮೂರು ಅವತಾರರೂಪವುಳ್ಳವರು. ಶ್ರೀಲಾತವ್ಯನಾಮಕರು ಶ್ರೀವಾದಿರಾಜನಾಮಕ ದ್ವಿಜರಾಗಿ ಅಂತಃಪುರಗತರಾಗಿ, ಶ್ರೀರುಕ್ಮಿಣೀದೇವಿಯ ಸ್ವಯಂವರಕಾಲದಲ್ಲಿ ಅವರಿಂದ ಪತ್ರವನ್ನು ತೆಗೆದುಕೊಂಡು ಶ್ರೀಕೃಷ್ಣದೇವರಿಗೆ ಅರ್ಪಿಸಿ ಕೃತಕೃತ್ಯರಾದರು. ಈ ಮಹಾಕಾರ್ಯವನ್ನು ಸಕಲರ ಕಣ್ಣಿಗೆ ಕಾಣದೆ ಮಾಡಿದರು. ವಾಯುದೇವರ ಪದವಿಯನ್ನು ಹೊಂದುವ ಅವರು ಬ್ರಹ್ಮಕಲ್ಪದವರೆಗೆ ಕೃಷ್ಣಪ್ರಸಾದೈಕಭಾಜನರಾಗಿ, ಶ್ರೀಕೃಷ್ಣನನ್ನು ಪೂಜೆಮಾಡುವವರಾಗಿ ವಾದಿರಾಜನಾಮಕ ಯತಿಗಳಾಗಿ ಅವತರಿಸುವರು. ಕಲಿಯುಗದಲ್ಲಿ ಶ್ರೀರುಕ್ಮಿಣೀಶ-ವಿಜಯವೆಂಬ ಕಾವ್ಯವನ್ನು ನಿರ್ಮಿಸಿ ಶ್ರೀಕೃಷ್ಣಾನುಗ್ರಹಕ್ಕೆ ಪಾತ್ರರಾಗಿ ಸಕಲಭಕ್ತರನ್ನು ಸಮುದ್ಧರಿಸುವರು'' ಎಂದು ವಾದಿರಾಜರ ಅವತಾರ ಕಾರ್ಯಗಳ ಬಗ್ಗೆ ಶ್ರೀವೇದವ್ಯಾಸದೇವರು ವಾಮನಪುರಾಣದಲ್ಲಿ ಅಪ್ಪಣೆ ಕೊಟ್ಟಿರುವರು.

तथा हि सत्तत्त्ववचनम् –
'मन्युरिन्द्रो मनुः सोमो भाविमध्वः सुरेश्वरः ।
लातव्यो वादिराजोऽसौ कुविदङ्गश्रुतौ श्रुतः ॥' इति ।

ಭಾವಾರ್ಥ - ಸತ್ತತ್ವವೆಂಬ ಗ್ರಂಥದಲ್ಲಿ ''ಭಾವಿಮಧ್ವರಾದ, ಸುರೇಶ್ವರರಾದ ಲಾತವ್ಯಾತ್ಮಕರಾದ ಈ ವಾದಿರಾಜತೀರ್ಥರು ಮನ್ಯುನಾಮಕರು, ರೋಚನನಾಮಕ ಇಂದ್ರಪದವಿಯನ್ನು ಹೊಂದುವವರು, ಸೋಮಶಬ್ದವಾಚ್ಯರಾಗಿ ಪವಮಾನಸೂಕ್ತ ಪ್ರತಿಪಾದ್ಯರು, ಕುವಿದಂಗಶ್ರುತಿಯಿಂದ ಪ್ರತಿಪಾದ್ಯರು'' ಎಂದು ಸ್ಫುಟವಾಗಿ ಪ್ರಕಟಮಾಡಲ್ಪಟ್ಟಿದೆ.

तथा हि ऋक् (७/९१/१) –

‘कुविदङ्ग नमसा ये वृधासः पुरा देवा अनवद्यास आसन् ।
ते वायवे मनवे बाधितायाऽवासयन्नुषसं सूर्येण ।।’ इति ।

ಋಗ್ವೇದದಲ್ಲಿ ''ಕುವಿದಂಗ ನಮಸಾ'' ಎಂಬ ಮಂತ್ರದಲ್ಲಿ ಸರ್ವದೇವ ಉಪಾಸ್ಯತ್ವವು ಹೇಳಲ್ಪಟ್ಟಿದೆ. ಅಂಗ=ಓ ಪುರುಷ! ಯಾವ ದೇವಾ=ದೇವತೆಗಳು ಶ್ರುತಿಪ್ರತಿಪಾದ್ಯರಾದ ಶ್ರೀವಾದಿರಾಜರಿಗೆ ನಮಸ್ಕಾರಾದಿಗಳನ್ನು ಮಾಡುವುದರಿಂದ ಹಿಂದೆ ಜ್ಞಾನಾದಿಗಳಿಂದ ಪೂರ್ಣರಾಗಿ ಅಜ್ಞಾನಾದಿದೋಷರಹಿತರಾಗಿ ಆಗಿದ್ದರೋ; ಅವರು ಯಾವುದೋ ಒಂದು ರಹಸ್ಯಸ್ಥಾನದಲ್ಲಿ ಸೂರ್ಯನಿಂದ ಸಹಿತರಾಗಿ, ಸಂಸಾರಪೀಡೆ- ಉಳ್ಳವರಿಂದ ರಕ್ಷಣೆಗಾಗಿ ಆಶ್ರಿತರಾದ, ಜ್ಞಾನಿಗಳಾದ ಶ್ರೀವಾದಿರಾಜರಿಗೆ ತಮ್ಮ ಬುದ್ಧಿಯನ್ನು ಅರ್ಪಿಸಿದರು. ಅವರ ಬಗ್ಗೆ ಧ್ಯಾನಮಾಡಿದರೆಂದು ಅಭಿಪ್ರಾಯ. (ಈ ಶ್ರುತಿಯು ವಾಯುದೇವರ ಪ್ರತಿಪಾದ್ಯವೂ ಆಗಿದೆ).

तथा हि प्रकाशसंहितावचनम् –
‘यथा देवौ ब्रह्मवायू अन्नप्राणाभिमानिनौ ।
लातव्यस्तु तथा नित्यं वर्तते जीवसाधकः ।।’ इति ।

ಭಾವಾರ್ಥ - ''ದೇವತೋತ್ತಮರಾದ ಬ್ರಹ್ಮವಾಯುಗಳು ಹೇಗೆ ಅನ್ನ ಮತ್ತು ಪ್ರಾಣಾಭಿಮಾನಿಗಳಾಗಿದ್ದಾರೋ ಹಾಗೆಯೇ ಲಾತವ್ಯರಾದ ಶ್ರೀವಾದಿರಾಜರೂ ನಿತ್ಯವೂ ಅಂದರೆ ಸದಾಕಾಲದಲ್ಲೂ ಜೀವಸಾಧಕರಾಗಿ ಸಕಲರನ್ನೂ ಸದಾ ಸಮನುಗ್ರಹಿಸುವರು'' ಎಂದು ಪ್ರಕಾಶಸಂಹಿತಾ ಎಂಬ ಗ್ರಂಥದಲ್ಲಿ ಇದೆ.

तथा हि बृहत्संहितावचनम् -
“पञ्चास्यवाक्यो यः “सिंहं नसन्त”श्रुतिविश्रुतः ।
स एव स्वाप्नकृत् स्वप्नो वादिराजो महामतिः ॥” इति ।

ಈ ಬೃಹತ್ಸಂಹಿತಾವಚನವು ಶ್ರೀವೃಂದಾವನಾಚಾರ್ಯರಿಂದಲೂ ಹಾಗೂ ಶ್ರೀಕಾಶೀರಾಘವೇಂದ್ರಾಚಾರ್ಯರ ಪೂರ್ವಜರಿಂದಲೂ ಸಮುದ್ಧೃತವಾಗಿದೆ ಎಂದು ಶಿಷ್ಯಶ್ರೇಷ್ಠರಾದ ಶ್ರೀ1008 ಶ್ರೀವಿಶ್ವೋತ್ತಮತೀರ್ಥರ ಪರಮಾಜ್ಞೆ.

ಅರ್ಥ – ''ಸಿಂಹಂ ನಸಂತ ಮಧ್ವೋ ಅಯಾಸಮ್' (ಋ. 9/79/3) ಎಂಬ ಸಿಂಹಶ್ರುತಿಯಲ್ಲಿ ಪ್ರಸಿದ್ಧರಾದವರು ಭಾವಿಮಧ್ವರು, ಅವರೇ ಸ್ವಾಪ್ನಕೃತ್ ಅಂದರೆ ಸ್ವಾಪ್ನವೃಂದಾವನಾಖ್ಯಾನದ ರಚಯಿತೃಗಳು, ಸ್ವಪ್ನಶಬ್ದವಾಚ್ಯರು ಮಹಾಮತಿಗಳೂ ಆದ ಶ್ರೀವಾದಿರಾಜರು''.

॥ [1]श्रीवादिराजतीर्थानामृजुत्वे श्रीऋक्संहितावचनानि ॥

'सहोरूपस्य देवस्य लातव्यस्य बलात्मकम् ।
मूलरूपं ज्ञाननतं जगद्धरणगं यतः ॥१॥

जातं तेनात्मना सर्वचेष्टकेन महात्मना ।
रूपत्रयावताराय निहितं हरिणा स्वयम् ॥२॥

अण्डाद् बहिः स्थितं मूलं सत्यलोकस्थितं महत् ।
गृहीत्वा रुग्मिणीपत्रं कृष्णान्तिकमुपागतम् ॥३॥

वादिराजाभिधं चेति मूलभेदविवर्जितम् ।
तत्र प्रथमकं रूपं विश्वरूपान्तिकस्थितम् ॥४॥

साधकं विष्णुकार्याणां शिष्यसन्मतिदायकम् ।
अमृतस्राविणीर्वाचः पञ्चरात्रादिनामिकाः ॥५॥

ऋतरूपस्य विष्णोर्हि औत्कर्षप्रतिपादकाः ।
अनयन्त स्वशिष्येषु द्वितीयं पृक्षनामकम् ॥६॥

मागधादिमहासेनादुर्मानक्षयकारकम् ।
कृष्णदत्तविचित्रान्नभोक्तृतत्प्रियमुत्तमम् ॥७॥

ऋगाद्या इतिहासश्च पुराणं पञ्चरात्रकम् ।
प्रोक्ताः सप्तशिवास्ताश्च मातरस्तत्र संस्थितम् ॥८॥

तद्विचारपरं प्रोक्तं ज्ञानदोग्धृ तृतीयकम् ।
लातव्यस्य ऋजोस्तस्य दशप्रमतिनामकम् ॥९॥

---

1. . These RkSamhitā stanzas were quoted and published by उडुपि अष्टमठाधिपतिगळु nearly two-hundred years ago.

वादिनां ज्ञानदानैकशीलानां राजनं यतः ।
वेति ज्ञानं समुद्दिष्टं देति दानमुदाहृतम् ॥१०॥

प्रोक्तः शील इकारेण राजनं राजशब्दितम् ।
वादिराजाभिधं रूपं दशप्रमतिशब्दितम् ॥११॥

पूर्णज्ञानं विना प्रोक्तराजनं तु कथं भवेत् ।
दशेति पूर्णमुद्दिष्टं ज्ञानं प्रमतिरीरितम् ॥१२॥

योषणोऽजनयन्तैतद् वादिराजाभिधं वपुः ।
तस्मादेव ज्ञानरूपान्महिषस्य हरेर्गुणान् ॥१३॥

पालनाद् वरणीयत्वाद् वर्प इत्यभिशब्दितान् ।
रुद्राद्याः सूरयश्चान्ये ज्ञातवन्तः सुखेन तु ॥१४॥

प्रकृष्टज्ञानरूपो यो भाविमध्वः प्रकीर्तितः ।
मधुशास्त्रं मध्वशास्त्रं सम्यग्वेत्ता गुरुः सदा ॥१५॥

प्रमाणरूपवेदादौ गतिमान् गूहितं हरिम् ।
आ समन्तात् पतित्वे तु मथ्नात्याम्नायशास्त्रतः ॥१६॥

रूपत्रयं प्रेर्यते यत् पित्रा स्वस्य परात्मना ।
प्रश्नरूपांस्तृणादीन् स दन्तेष्वारोप्य जक्षति ॥१७॥

लातव्याचार्यवर्यस्य यस्य रूपत्रिकं ह्युभौ ।
रमानारायणौ साक्षादिन्वतस्तत्कृपाशुचिः ॥१८॥

आभ्यामेवावरः प्रोक्तस्तयोराज्ञानुसारतः ।
उदरं प्राविशन्मातुस्तन्निमित्तविकर्म नो ॥१९॥

श्रीमन्मध्वाचार्यदेहं गर्भस्थश्च विशत्यसौ ।
तदागमनपर्यन्तं तत्र स्थित्वा तु गच्छति ॥२०॥

मातृप्रविष्टोऽपि शुचिर्गर्भपीडाविवर्जितः ।
विशेषेणाभिवृद्धोऽभूद् ऋगाद्या स्वारुहत् क्रमात् ॥२१॥

सनातनासु वाच्यासु नूतनास्ववरासु च ।
पञ्चरात्रपुराणेतिहासाख्यासु निधावते ॥२२॥

इति सूक्तगतं रूपत्रयमेतन्महात्मनः ।
यो वेद वेदवित् स स्यात् तत्त्ववित् तत्प्रसादतः ॥२३॥' इति ॥

ಶ್ರೀಋಕ್ಸಂಹಿತಾವಚನಗಳ ಭಾವಾರ್ಥ -

ಶ್ರೀವಿಷ್ಣುವಿನ ಪರಮಾಜ್ಞಾನುಸಾರವಾಗಿ ವೈಷ್ಣವಾಚಾರ್ಯರಾದ ಶ್ರೀಲಾತವ್ಯರು ಶ್ರೀಹರಿಪ್ರೀತ್ಯರ್ಥವಾಗಿ ಅವತರಿಸಿದರು. ಶ್ರೀಲಾತವ್ಯರ ಸಹೋರೂಪರು ಮತ್ತು ಬಲಾತ್ಮಕರು. ಲಾತವ್ಯರ ಮೂಲರೂಪವಾದರೋ ಜ್ಞಾನಾತ್ಮಕವಾದದ್ದು ಹಾಗೂ ಸಕಲಜಗತ್ತನ್ನು ಶ್ವಾಸರೂಪದಿಂದ ಭರಣಮಾಡುವಂತಹ ಪಾಲನೆ ಹಾಗೂ ಚಾಲನೆ-ಗಳನ್ನು ಮಾಡುವಂತಹ ವಿಶಿಷ್ಟವೈಶಿಷ್ಟ್ಯವುಳ್ಳದ್ದು. ಆದಕಾರಣದಿಂದಲೇ ಲಾತವ್ಯರಿಗೆ 'ಭರ್ಗಃ' ಎಂಬ ಹೆಸರು ಶ್ರುತಿಪ್ರಸಿದ್ಧವಾಗಿದೆ.

ಸ್ವಯಂ ಸರ್ವಚೇಷ್ಟಾಪ್ರದನೂ, ಸರ್ವೋತ್ತಮನೂ ಮಹಾತ್ಮನೂ ಆದ ಶ್ರೀವಿಷ್ಣುವಿನ ಪರಮಾಜ್ಞೆಯಿಂದ ಸತ್ಯಲೋಕೇಶ್ವರನಾದ ಶ್ರೀಮುಖ್ಯಪ್ರಾಣದೇವರು ಯಾವರೀತಿಯಾಗಿ 'ಪ್ರಧಾನಾಂಗಂ ಹಿ ಮಾರುತಿಃ' ಎಂಬಂತೆ ಭಗವತ್ಕಾರ್ಯ-ಸಾಧಕರಾಗಿ ಹನುಮಭೀಮಮಧ್ವಾತ್ಮಕವಾದ ಮೂರು ಅವತಾರಗಳನ್ನು ತಾಳಿದರೋ ಅದೇ ರೀತಿಯಾಗಿ ಲಾತವ್ಯಾಚಾರ್ಯರೂ ಕೂಡ ಮೂರು ರೂಪಗಳನ್ನು ಶ್ರೀವಿಷ್ಣು-ಕಾರ್ಯಾರ್ಥವಾಗಿ ಧರಿಸಿದರು.

ಬ್ರಹ್ಮಾಂಡಕಟಾಹದಿಂದ ಅಂತಃಪಾತಿಯಾದ ಸತ್ಯಲೋಕಸ್ಥಿತವಾದ ಮೂಲ-ರೂಪವೇ ಶ್ರೀಕೃಷ್ಣಸೇವಾರ್ಥವಾಗಿ ವಿರಾಜಮಾನವಾದ ಶ್ರೀಲಾತವ್ಯರೂಪವು.

ಅಂತಹ ಮಹತ್ತತ್ವಾಭಿಮಾನಿಯಾದವರು, ಮೂಲಭೇದವಿವರ್ಜಿತರೂ ಆದ ಲಾತವ್ಯಾತ್ಮಕಶ್ರೀವಾದಿರಾಜರು ತಮ್ಮ ತಾಯಿಯಾದ ಶ್ರೀರುಕ್ಮಿಣೀದೇವಿಯ ವಿಷ್ಣು-ಸರ್ವೋತ್ತಮತ್ವ ಪ್ರತಿಪಾದಕವಾದ ಪತ್ರವನ್ನು ಸ್ವೀಕರಿಸಿ, ಶ್ರೀಕೃಷ್ಣನ ಸಮೀಪಕ್ಕೆ ಹೋಗಿ ಶ್ರೀಕೃಷ್ಣನಿಗೆ ಕೊಟ್ಟು ಸೇವಿಸಿದರು. ಇದು ವಿಶ್ವನಾಮಕ ಶ್ರೀಹರಿಯ ಸನ್ನಿಧಾನದಲ್ಲಿದ್ದ ಪ್ರಥಮರೂಪವು.

ಈ ದಿವ್ಯ ಲಾತವ್ಯರೂಪವೇ ಶಿಷ್ಯಸನ್ಮತಿದಾಯಕವು, ಹಾಗೂ ಶ್ರೀವಿಷ್ಣುಕಾರ್ಯ-ಸಾಧಕವು. ಹಾಗೂ ಅಮೃತಸ್ರಾವಿಗಳಾದ ಪವಿತ್ರವಚನಗಳುಳ್ಳ ವೇದಶಾಸ್ತ್ರಗಳಿಂದ, ನಾರಾಯಣೋದಿತ ಪಂಚರಾತ್ರಾದಿಗ್ರಂಥಗಳ ಪ್ರಮಾಣಗಳಿಂದ ಋತರೂಪನಾದ ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನು ಸಂಸ್ಥಾಪಿಸಿ ತನ್ನ ಶಿಷ್ಯರಾದ ಸಪತ್ನೀಕರಾದ ಗರುಡಶೇಷರುದ್ರಾದಿ ಸರ್ವದೇವತೆಗಳನ್ನೂ, ಸರ್ವಭಕ್ತರನ್ನು ಸಮುದ್ಧರಿಸಿ ಅನುಗ್ರಹಿಸಿದರು.

ದ್ವಿತೀಯಾವತಾರದಲ್ಲಿ ಶ್ರೀಲಾತವ್ಯರು 'ಪೃಕ್ಷಃ' ಎಂಬ ಹೆಸರುಳ್ಳವನಾಗಿ (ಪೃಕ್ಷಃ = ರಿಪುಪೃತನಾಕ್ಷಯಕಾರೀ) ಭೀಮಸೇನನಂತೆ ಮಹಾಭಾರತಯುದ್ಧದಲ್ಲಿ ಮಾಗಧಾದಿ-ಮಹಾಸೇನಾದುರ್ಮಾನವನ್ನು ಸರ್ವಥಾ ನಾಶಗೊಳಿಸಿದರು.

ಶ್ರೀಕೃಷ್ಣನು ಅತ್ಯಂತಪ್ರೀತಿಯಿಂದ ಸಮನುಗ್ರಹಿಸಿದ ವಿಷ್ಣುಭಕ್ತಿಯಿಂದ ಚಿತ್ರಿತವಾದ ಚಿತ್ರಾನ್ನವನ್ನು ಸ್ವೀಕರಿಸಿ ಕೃತಾರ್ಥನಾದರು.

''ಸಪ್ತಶಿವಾಃ'' ಎಂದು ಪ್ರಮಾಣತಮಗಳಾದ, ಪರಮಮಂಗಳಕರಗಳಾದ, ಮೋಕ್ಷಪ್ರದಗಳಾದ ಋಗಾದಿ ನಾಲ್ಕುವೇದಗಳು, ಇತಿಹಾಸ, ಪುರಾಣ, ಪಂಚರಾತ್ರಗಳು ಎಂಬ ಸಪ್ತಶಾಸ್ತ್ರಗಳಿಂದ ತತ್ವಜ್ಞಾನವನ್ನು (ದೋಹಸೇ) ದೋಹನ ಮಾಡುವ ತೃತೀಯರೂಪವೇ ಲಾತವ್ಯಾತ್ಮಕಶ್ರೀವಾದಿರಾಜರ ದಶಪ್ರಮತಿರೂಪವು.

ವಾದಿಗಳು ಅಂದರೆ ಜ್ಞಾನದಾನ ಮಾಡುವ ದಿವ್ಯಗುಣಗಳುಳ್ಳ ಪ್ರಾಜ್ಞರಿಗೆ ಜ್ಞಾನದೀಪವನ್ನು ಕೊಡುವವರು ಶ್ರೀವಾದಿರಾಜರು. 'ವಾ' ಎಂದರೆ ಮೋಕ್ಷಪ್ರದವಾದ ತತ್ತ್ವಜ್ಞಾನ, 'ದಾ' ಎಂದರೆ ದಾನ, 'ಇ' ಎಂದರೆ ಶೀಲ, 'ರಾಜನಮ್' ಎಂದರೆ ರಾಜ ಎಂದರ್ಥವು. ಮೋಕ್ಷಪ್ರದವಾದ ತತ್ವಜ್ಞಾನವನ್ನು ಯೋಗ್ಯರಲ್ಲಿ ದಾನಮಾಡುವ ಶೀಲವುಳ್ಳವನಾದ್ದರಿಂದ ವಾದಿರಾಜ ಎಂಬ ಸಾರ್ಥಕನಾಮಧೇಯವುಳ್ಳವರು. ಈ ವಾದಿರಾಜರೂಪವೇ 'ದಶಪ್ರಮತಿ' ಎಂಬ ಹೆಸರುಳ್ಳದ್ದು. ಪೂರ್ಣಜ್ಞಾನವಿಲ್ಲದಿದ್ದರೆ 'ರಾಜನಮ್' ಎಂಬುದು ಕೂಡುವುದಿಲ್ಲ. 'ದಶ' ಎಂದರೆ 'ಪೂರ್ಣಮ್' ಎಂದರ್ಥವು. ಜ್ಞಾನಮ್ ಎಂದರೆ ಪ್ರಮತಿ ಎಂದರ್ಥವು.

'ಯೋಷಣಃ' = ಇಲ್ಲಿ ಲಾತವ್ಯಾತ್ಮಕಶ್ರೀವಾದಿರಾಜರನ್ನು ಉತ್ಪಾದಿಸುವ ಅಂದರೆ ಜನ್ಮವನ್ನು ಕೊಟ್ಟವರಾದ ಸ್ತ್ರೀಯರು ಪ್ರಸ್ತುತರಾದ್ದರಿಂದ ಶ್ರೀಭೂದುರ್ಗಾರೂಪವುಳ್ಳ ವೇದಾಭಿಮಾನಿಯು, ವೇದಪ್ರತಿಪಾದ್ಯಳೂ ಆದ ಶ್ರೀಮಹಾಲಕ್ಷ್ಮೀದೇವಿಯೇ ಸಮುಪಾತ್ತಳು. (ಅಥವಾ 'ವಚನವ್ಯತ್ಯಯಾದ್ ಬಹುವಚನಮ್' ಎಂಬುದರಿಂದ

ಯೋಷಣಃ = ಯೋಷಾ = ಶ್ರೀಮಹಾಲಕ್ಷ್ಮೀಃ ಎಂದು ಅರ್ಥೈಸಬೇಕು ಅಂದರೆ ಯೋಷಣಃ ಎಂಬ ವೈದಿಕ ಬಹುವಚನವನ್ನು ಯೋಷಾ ಎಂದು ವ್ಯತ್ಯಯದಿಂದ ಏಕವಚನಾರ್ಥದಲ್ಲಿ ಯೋಜಿಸಬೇಕು. ರಾಮಾಚಾರ್ಯರ ಸಹಧರ್ಮಚಾರಿಣಿಯಾದ ಸರಸ್ವತೀದೇವಿ (ಗೌರೀದೇವಿ)ಯಲ್ಲಿ ಸನ್ನಿಹಿತಳಾಗಿದ್ದು ಶ್ರೀಭೂವರಾಹನಿಗೆ ಜನ್ಮಕೊಟ್ಟವಳು ಶ್ರೀಭೂದುರ್ಗಾಸ್ವರೂಪಳಾದ ಮಹಾಲಕ್ಷ್ಮೀದೇವಿಯು ಎಂದು ತಾತ್ಪರ್ಯವು.

ಶ್ರೀವಾದಿರಾಜರು ಶ್ರೀಹರಿಯ ಗುಣಗಳನ್ನು ಪ್ರತಿಪಾದನೆ ಮಾಡಿ ಸಜ್ಜನರನ್ನು ಪಾಲನೆ ಮಾಡಿ ವರಣಮಾಡುವುದರಿಂದ 'ವರ್ಪಃ' ಎಂಬ ಹೆಸರುಳ್ಳವರು. (ವರ್ಪಸಃ = ವ್ಯತ್ಯಯಾದ್ ವರ್ಪಃ ಇತ್ಯಪಿ). (ಪಾಲನಾದ್ ವರಣೀಯತ್ವಾದ್ ವರ್ಪ ಇತ್ಯಭಿಶಬ್ದಿತಾನ್ ಎಂದು ಋಕ್ಸಂಹಿತಾವಚನವಿದೆ). 'ವರ್ಪಃ= ಸಕಲ-ಸಜ್ಜನರನ್ನು ಪಾಲನೆ ಮಾಡುವಂತಹ, ಮಹಿಷಸ್ಯ = ಜೀವೋತ್ತಮರಾದ ಶ್ರೀವಾದಿ-ರಾಜರ ಮೂರನೆಯ ಅವತಾರದಿಂದ ತತ್ವಜ್ಞಾನವು ಪ್ರಸರಿಸಲು ಸೂರಿಗಳಾದ ಶ್ರೀರುದ್ರಾದಿದೇವತೆಗಳು ಅತ್ಯಂತಸುಖದಿಂದ ಶ್ರೀವಿಷ್ಣುತತ್ವಜ್ಞಾನಿಗಳಾದರು. (ವ್ಯತ್ಯಯಸಿದ್ಧಾಂತದಿಂದ ಈ ಬಳಿತ್ಥಾಸೂಕ್ತಾರ್ಥವು ಶಾಸ್ತ್ರಸಮ್ಮತವೇ). ಮತ್ತು ಮಧ್ವಃ = ಪ್ರಕೃಷ್ಟಜ್ಞಾನರೂಪವುಳ್ಳವರೂ ಭಾವಿಮಧ್ವರೂ ಆದ(ಮಧ್ವೋ ಭಾವಿ-ಮಧ್ವಃ) ಶ್ರೀವಾದಿರಾಜರು ಶ್ರೀಮಧ್ವಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವ ಋಜು-ಪುಂಗವರು. ಸ್ವತಃಪ್ರಮಾಣಗಳಾದ ವೇದಾದಿಗಳನ್ನು ಚೆನ್ನಾಗಿ ಮಥನ (ವಿಮರ್ಶೆ-ಮಾಡಿ)ಮಾಡುವ ಮೂಲಕ ಅವುಗಳಲ್ಲಿ ಗೂಢನಾಗಿದ್ದ ಶ್ರೀಹರಿಯೇ ಸರ್ವಸ್ವಾಮಿ, ಸರ್ವೋತ್ತಮನು ಎಂದು ತಿಳಿಸಿ ಕೃತಾರ್ಥನಾದರು. ಶ್ರೀಹರಿಯಿಂದ ಪ್ರೇರಿತನಾಗಿ ಪ್ರಶ್ನೆಗಳೆಂಬ ಬಳ್ಳಿಗಳನ್ನು ತನ್ನ ದಂತಗಳಲ್ಲಿ ಆರೋಪ ಮಾಡಿ (ಇಟ್ಟುಕೊಂಡು) ಭಕ್ಷಿಸುವವನು ಅರ್ಥಾತ್ ಸಂಶಯಗಳನ್ನು ಪರಿಹರಿಸುವವರು.

ಹೀಗೆ ಶ್ರೀರಮಾನಾರಾಯಣರಿಬ್ಬರೂ ಲಾತವ್ಯಾತ್ಮಕಶ್ರೀವಾದಿರಾಜರ ಅವತಾರವನ್ನು (ಉತ್ಪತ್ತಿಯನ್ನು) ತತ್ವಜ್ಞಾನಕಾರ್ಯಕ್ಕಾಗಿ ಸ್ಥಿತಿ ಮಾಡುವವರಾಗಿದ್ದಾರೆ.

ಶ್ರೀಲಕ್ಷ್ಮೀನಾರಾಯಣರಿಗಿಂತಲೂ ಕನಿಷ್ಠರಾದ ಶ್ರೀವಾದಿರಾಜರು ಕರುಣಾರಸ-ಪೂರಿತರಾಗಿ ಗರ್ಭವಾಸಜನಿತದುಃಖಾದಿದೋಷಗಳಿಂದ ಸರ್ವಥಾ ರಹಿತರಾಗಿ-ರುವುದರಿಂದ 'ಶುಚಿಃ' ಎಂಬ ಹೆಸರುಳ್ಳವರು. ಮಾತೃಗರ್ಭವನ್ನು ಪ್ರವೇಶಿಸಿದರೂ ಗರ್ಭದುಃಖವಿವರ್ಜಿತರು. ಶ್ರೀಹಯಾಜ್ಞೆಯಿಂದ ಶ್ರೀಮಧ್ವಾಚಾರ್ಯರ ದೇಹ-ವನ್ನು ಪ್ರವೇಶಮಾಡಲು ಸಮರ್ಥರು. (ಅನ್ಯೋನ್ಯಾನುಪ್ರವೇಶದಲ್ಲಿ ಸಮರ್ಥರು)

ಈ ಮೂರು ಅವತಾರಗಳಲ್ಲಿಯೂ ಅರ್ಥಾತ್ 1) ಅಗ್ನಿದ್ಯೋತನನಾಮಕ ಶ್ರೀವಾದಿರಾಜ, 2)ಪೃಕ್ಷನಾಮಕ ಶ್ರೀವಾದಿರಾಜ, 3)ದಶಪ್ರಮತಿನಾಮಕ ಶ್ರೀವಾದಿರಾಜ ನಾಮಕ ಲಾತವ್ಯಾಚಾರ್ಯರು ಮೂರು ಅವತಾರಗಳಲ್ಲಿಯೂ ದುಷ್ಕರ್ಮಾದಿಗಳಿಂದ ಅಸ್ಪೃಷ್ಟರಾಗಿಯೇ ಬೆಳೆದರು.

ಸನಾತನನಾದ ಶ್ರೀವಿಷ್ಣುವನ್ನು ಪ್ರತಿಪಾದಿಸುವುದರಿಂದಲೂ 'ಶುಚಿಃ' ಎಂದು ಕರೆಯಲ್ಪಡುವವರು. ಸನಾತನಗಳಾದ ಸಪ್ತವಿದ್ಯೆಗಳನ್ನು ತ್ವರಿತವಾಗಿ ಅಂದರೆ ಸ್ವಯಂ ಪ್ರತಿಭಾತಪರಾವರರಾದ ಕಾರಣ ಪ್ರವಚನ ಮಾಡುವ ಅರ್ಥಾತ್ ವ್ಯಾಖ್ಯಾನಮಾಡುವ ಸಾಮರ್ಥ್ಯವುಳ್ಳವರು.

ಈ ವಿಧವಾಗಿ ಶ್ರೀಮಧ್ವದೇವರಂತೆ (ವಾಣೀಪತಿತ್ವವನ್ನು ಬಿಟ್ಟು) ('ವಿನಾ ವಾಣೀಪತಿತ್ವಂ ಮೇ ದತ್ತವಂತೌ ಚ ಕಿಂ ವದೇ' ಎಂದು ಸ್ವಾಪ್ನವೃಂದಾವನಾಖ್ಯಾನವು) ಬಳಿತ್ಥಾಸೂಕ್ತಪ್ರತಿಪಾದ್ಯರೂ, ಮಹಾತ್ಮರೂ ಆದ ಶ್ರೀಲಾತವ್ಯಾತ್ಮಕ ಶ್ರೀವಾದಿರಾಜರ ವೈದಿಕಾಚಾರ್ಯತ್ವ (ವೇದಪ್ರತಿಪಾದ್ಯತ್ವ)ವನ್ನು ಯಾರು ತಿಳಿಯುತ್ತಾರೋ ಅವರೇ ವೇದಾರ್ಥವನ್ನು ತಿಳಿದವರಾಗುತ್ತಾರೆ. ಹಾಗೂ ಶ್ರೀವಾದಿರಾಜರ ಸಮನುಗ್ರಹದಿಂದ ತತ್ವವನ್ನು ತಿಳಿದವರಾಗಿ ತತ್ವಜ್ಞಾನಿಗಳಾಗುವರು ಎಂಬುದಾಗಿ ಋಕ್ಸಂಹಿತಾಗ್ರಂಥದಲ್ಲಿ ಶ್ರೀಹಯಗ್ರೀವದೇವರ ಅಪ್ಪಣೆ ಇದೆ.

ಇದಲ್ಲದೇ ಬಹು ಶ್ರುತಿಸ್ಮೃತಿಗಳಲ್ಲೂ ಶ್ರೀವಾದಿರಾಜರ ಬಗ್ಗೆ ವಿವರಗಳು ಬಂದಿದೆ.

तच्चोक्तं बृहत्संहितायां –

महारवश्रुतिश्चैनं ब्रह्मा ज्ञात्वेति वक्ति हि ।
स्वोपासकानां भक्तानां लातव्योऽभीष्टदायकः ॥

तथा हि श्रीभागवततात्पर्यनिर्णयोदाहृतमहारवश्रुतिः (१०/९४/३५)

ब्रह्मा ज्ञात्वेति लोकप्रवृत्तिं प्रवर्ततां को नु मोक्षं ददाति ।
अतो ब्रह्मोपासते साधु धीरा नाहम्भावस्तेषु रुद्राधिवासः ॥

''ಬ್ರಹ್ಮಾ ಜ್ಞಾತ್ವೇತಿ'' ಎಂಬ ಮಹಾರವಶ್ರುತಿಯು ಲಾತವ್ಯರಾದ ಶ್ರೀವಾದಿರಾಜರನ್ನು ಪ್ರತಿಪಾದಿಸುತ್ತದೆ. ತಥಾಹಿ 'ತನ್ನನ್ನು ಋಜುಗಣಸ್ಥರೆಂದು ಯಾರು ಉಪಾಸನೆ

ಮಾಡುತ್ತಾರೋ ಅಂತಹವರಿಗೆ ಸರ್ವಾಭೀಷ್ಟಗಳನ್ನು ದಯಪಾಲಿಸುತ್ತಾರೆ'. ಎಂದು ಬ್ರಹ್ಮದೇವರು ಬೃಹತ್ಸಂಹಿತಾಗ್ರಂಥದಲ್ಲಿ ಅಪ್ಪಣೆ ಕೊಡುತ್ತಾರೆ.

तथा हि व्योमसंहिता –

सञ्जर्भुराणसूक्तेन लातव्यो हि सुरेश्वरः ।
गीयते ऋजुगाथोऽसौ वादिराजो महान् यतिः ॥

ದೇವತೆಗಳಿಗೆ ಗುರುವಾದ ಶ್ರೀಲಾತವ್ಯರಾದ ಶ್ರೀವಾದಿರಾಜರು 'ಸಂಜರ್ಭುರಾಣಸ್ತರುಭಿಃ ಸುತೇ ಗೃಭಮ್' ಎಂದ ಮಂತ್ರಪ್ರತಿಪಾದ್ಯರು. ಋಜುಗಾಥರಾದ ಇವರು ಮಹತ್ತತ್ತ್ವಾಭಿಮಾನಿಗಳಾದ ಯತೀಶ್ವರರು' ಎಂದು ವ್ಯೋಮಸಂಹಿತಾವಚನದಲ್ಲಿದೆ.

ತಥಾ ಹಿ ಋಕ್ -

सञ्जर्भुराणस्तरुभिः सुते गृभं चित्तगर्भासु सुस्वरुः ।
धारवाकेष्वृजुगाथ शोभसे वर्धस्वपत्नीरभि जीवो अध्वरे ॥
- (5/44/5) ಎಂದಿದೆ.

तथा हि बृहत्संहितायां चतुर्मुखवचनम् –

"सितासितेति सूक्तेन वादिराजो यतीश्वरः ।
गीयते, स्वं च भजताम् आनन्दम्, इतरं तथा ।
द्वेषिणां दायको वाजिवक्त्रधारी महान् यतिः ॥" इति ।

''ಸಿತಾಸಿತೇ ಸರಿತೇ ಯತ್ರ ಸಂಗಥೇ'' ಎಂಬ ಮಂತ್ರದಿಂದ ಋಜುಗಣಸ್ಥರಾದ ಶ್ರೀವಾದಿರಾಜರು ಪ್ರತಿಪಾದಿತರಾಗಿದ್ದಾರೆ. ಯಾವ ಭಕ್ತರು ಈ ಯತೀಶ್ವರರನ್ನು ಋಜುಗಳಾದ ಲಾತವ್ಯರು ಎಂದು ಸ್ವರೂಪವನ್ನು ತಿಳಿದು ಸೇವಿಸುತ್ತಾರೆಯೋ ಅಂತಹವರಿಗೆ ಇವರು ಅತ್ಯುತ್ಕಟವಾದ ಆನಂದವನ್ನು ದಯಪಾಲಿಸುವರು. ಯಾರು ಇವರನ್ನು ಲಾತವ್ಯಸ್ವರೂಪರೆಂದು ತಿಳಿಯುವುದಿಲ್ಲವೋ, ಸಾಮಾನ್ಯಯತಿಯಂತೆ ಭಾವಿಸುವರೋ ಅಂತಹವರಿಗೆ ದುಃಖವನ್ನು ಕೊಡುವರು. ಇವರು ಶ್ರೀಹಯಗ್ರೀವದೇವರ ವಿಶಿಷ್ಟಪ್ರತಿಮಾಸ್ವರೂಪರು, ಮಹತತ್ತ್ವಾಭಿಮಾನಿಗಳು ಎಂದು ಬೃಹತ್ಸಂಹಿತಾ ಗ್ರಂಥದಲ್ಲಿ ಶ್ರೀಬ್ರಹ್ಮದೇವರ ಅಪ್ಪಣೆ ಇದೆ.

ಸಿತಾಸಿತೇ ಮಂತ್ರದ ಪೂರ್ಣಪಾಠ ಹೀಗಿದೆ-

तथा हि ऋग्वेदखिलम् (१०/७५/५ मन्त्रस्यानन्तरं)

सितासिते सरिते यत्र सङ्गथे तत्राप्लुतासो दिवमुत्पतन्ति ।
ये वै तन्वं वि सृजन्ति धीरास्ते जनासो अमृतत्वं भजन्ते ॥
इति ।

तथा हि बृहत्संहितायां चतुर्मुखवचनम् –

"देवस्यास्येति वचनं रुद्राद्यैश्वर्यकारणम् ।
ब्रवीति वादिराजं तं संशयं त्यजतामराः ॥" इति ।

ಬೃಹತ್ಸಂಹಿತಾದಲ್ಲಿಯೇ ಇನ್ನೊಂದು ಬ್ರಹ್ಮದೇವರ ವಚನ ಹೀಗಿದೆ - 'ದೇವಸ್ಯಾಸ್ಯೇತಿ' ಎಂಬ ಮಂತ್ರವು ಅಂದರೆ 'ಅಸ್ಯ ದೇವಸ್ಯ ಮೀಳ್ಹುಷೋ' ಎಂಬ ಮಂತ್ರವು ರುದ್ರಾದಿದೇವತೆಗಳಿಗೆ ಸೌಭಾಗ್ಯವನ್ನು ಕೊಡುವ ಶ್ರೀವಾದಿರಾಜರನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಎಲೈ ಸರ್ವದೇವತೆಗಳೇ! ನೀವೆಲ್ಲರೂ ವೇದ-ಪ್ರಸಿದ್ಧವಾದ ಈ ವಿಷಯದಲ್ಲಿ ಸಂಶಯವನ್ನು ಬಿಟ್ಟು ಪಂಚವೃಂದಾವನಸ್ಥರು, ಋಜುಪುಂಗವರು ಆದ ಶ್ರೀವಾದಿರಾಜರನ್ನು ಸೇವೆ ಮಾಡಿರಿ''. ತಥಾಹಿ ಆ ಋಗ್ವೇದ-ವಚನವು ಕೆಳಕಂಡಂತಿದೆ.

तथा हि ऋक् (७/४०/५)

"अस्य देवस्य मीळ्हुषो वया विष्णोरेषस्य प्रभृथे हविर्भिः ।
विदे हि रुद्रो रुद्रियं महित्वं यासिष्टं वर्तिरश्विनाविरावत् ॥" इति ॥

तथा हि श्रीनारायणोदितपञ्चरात्रम् –

"कमठश्रुतिर्मुख्यवृत्त्या यो जीववदिति वक्ति हि ।
मोक्षदं वादिराजं तं दशप्रमतिशब्दितम् ॥" इति ॥

''ಯೋ ಜೀವವದ್ ಯೋನಿಷು ಭಾತ್ಯನಂತಃ' ಎಂಬ ಕಮಠಶ್ರುತಿಯು ಮುಖ್ಯವೃತ್ತ್ಯಾ ದಶಪ್ರಮತಿಶಬ್ದವಾಚ್ಯರು, ಮೋಕ್ಷಪ್ರದರೂ, ಲಾತವ್ಯನಾಮಕ ಋಜು-

ಗಳ ಅವತಾರರೂ ಆದ ಶ್ರೀವಾದಿರಾಜರನ್ನು ಪ್ರತಿಪಾದಿಸುತ್ತದೆ ಎಂದು ನಾರಾಯಣೋದಿತಪಂಚರಾತ್ರದಲ್ಲಿ ಶ್ರೀಹರಿಯ ಅಪ್ಪಣೆ ಇದೆ.

ಆ ವಚನವಾದರೋ ಶ್ರೀಮದಾಚಾರ್ಯರಿಂದ ಭಾಗವತತಾತ್ಪರ್ಯನಿರ್ಣಯದಲ್ಲಿ ಉದ್ಧೃತವಾಗಿದೆ.

तथा हि श्रीमद्भागवततात्पर्यनिर्णयोदाहृतकमठश्रुतिः (१०/९४/२०)

"यो जीववद् योनिषु भात्यनन्तो मूढैस्तमोगैर्भरताधिगम्यः ।
निचाय्य तं शाश्वतमात्मसंस्थं तदिच्छवोत्मन्यदधुर्महान्तम् ॥" इति

तथा हि न्यायरत्नावली (२/२३) –

"सुन्दोपसुन्दौ हन्तुं प्राग्ब्रह्मा चक्रे तिलोत्तमाम् ।
भाविब्रह्मा त्विमौ हन्तुं चक्रे युक्तितिलोत्तमाम् ॥" इति ।

''ಸುಂದೋಪಸುಂದರೆಂಬ ದೈತ್ಯರನ್ನು ಸಂಹಾರ ಮಾಡಲು ಯಾವ ರೀತಿಯಿಂದ ಚತುರ್ಮುಖಬ್ರಹ್ಮದೇವರು ತಿಲೋತ್ತಮೆಯನ್ನು ಸೃಷ್ಟಿಸಿದರೋ ಅದೇ ವಿಧವಾಗಿ 'ಮಾಯಾವಾದ ಮತ್ತು ಅದ್ವೈತವಾದ' ಎಂಬ ಸುಂದೋಪಸುಂದರನ್ನು ನಾಶ ಮಾಡಲು ಭಾವಿಬ್ರಹ್ಮನಾದ ನಾನು 'ಯುಕ್ತಿಮಲ್ಲಿಕಾ' ಎಂಬ ತಿಲೋತ್ತಮೆಯನ್ನು ಸೃಷ್ಟಿಸಿದೆನು'' ಎಂಬುದಾಗಿ ನ್ಯಾಯರತ್ನಾವಲಿಯಲ್ಲಿ ಶ್ರೀವಾದಿರಾಜರು ಹೇಳಿದ್ದಾರೆ. ಇದೇ ವಿಷಯವನ್ನು ಕೆಳಕಂಡ ಪ್ರಕಾಶಸಂಹಿತೆಯ ವಾಕ್ಯವೂ ದೃಢೀಕರಿಸುತ್ತದೆ.

तथा च प्रकाशसंहिता –

"लातव्यः श्रीहयग्रीवविशिष्टप्रतिमा महान् ।
भाविब्रह्मा वादिराजश्चक्रे युक्तितिलोत्तमाम् ॥" इति ।

ಶ್ರೀಹಯಗ್ರೀವದೇವರ ವಿಶಿಷ್ಟಪ್ರತಿಮರೂ, ಲಾತವ್ಯರೂ, ಮಹತ್ತತ್ತ್ವಾಭಿಮಾನಿಗಳೂ, ಭಾವಿಬ್ರಹ್ಮರೂ ಆದ ಶ್ರೀವಾದಿರಾಜಸ್ವಾಮಿಗಳು ಯುಕ್ತಿಮಲ್ಲಿಕಾ ಎಂಬ ತಿಲೋತ್ತಮೆಯನ್ನು ಸೃಷ್ಟಿಮಾಡಿದರು ಎಂದು ಪ್ರಕಾಶಸಂಹಿತೆಯಲ್ಲಿ ಶ್ರೀನಾರಾಯಣನ ಅಪ್ಪಣೆ ಇದೆ.

तच्चोक्तं बृहत्संहितायाम् –

"लातव्यो यो हयग्रीवविशिष्टप्रतिमा महान् ।
मन्युः सर्वज्ञ एवासौ वादिराजो यतीश्वरः ॥

कामधेनुर्यथापूर्वं सर्वाभीष्टफलप्रदा ।
तथा कलौ वादिराजश्रीपादोऽभीष्टदः सताम् ॥

पञ्चवृन्दावने पुण्ये पञ्चरूपात्मको हरिः ।
पञ्चीकृत्य स्वरूपाणि नित्यं सन्निहितः स्वयम् ॥" इति ।

ಈ ವಾದಿರಾಜರೆಂಬ ಯತೀಶ್ವರರು ಮನ್ಯುನಾಮಕರೂ, ಸರ್ವಜ್ಞರೂ, ಶ್ರೀಹಯಗ್ರೀವದೇವರ ವಿಶಿಷ್ಟಪ್ರತಿಮರೂ, ಮಹತ್ತತ್ವಾಭಿಮಾನಿಗಳೂ ಆದ ಶ್ರೀಲಾತವ್ಯರಾಗಿರುವರು. ಪೂರ್ವದಲ್ಲಿ ಕಾಮಧೇನುವು ಹೇಗೆ ಸರ್ವಾಭೀಷ್ಟಫಲಪ್ರದವೋ ಹಾಗೆಯೇ ಕಲಿಯುಗದಲ್ಲಿ ಶ್ರೀವಾದಿರಾಜರೆಂಬ ಶ್ರೀಪಾದರು ಸರ್ವಾಭೀಷ್ಟ ಪ್ರದರಾಗಿರುವರು. ಇಂತಹ ಮಹಾನುಭಾವರ ಪಂಚವೃಂದಾವನದಲ್ಲಿ ಪಂಚರೂಪಾತ್ಮಕನಾದ ಶ್ರೀಹರಿಯು ತನ್ನ ಸ್ವರೂಪಗಳನ್ನು ಪಂಚವಿಧವಾಗಿ ಮಾಡಿ ಭಕ್ತರನ್ನು ಉದ್ಧರಿಸಲು ಸದಾ ಸನ್ನಿಹಿತನಾಗಿರುವನು ಎಂದು ಬೃಹತ್ಸಂಹಿತಾದಲ್ಲಿ ಬ್ರಹ್ಮದೇವರ ವಚನವಿದೆ.

तच्चोक्तं धर्मसंहितायाम् –

"स्वायवो ब्रह्मा लातव्यो योऽसौ ताण्ड्यश्रुतौ श्रुतः ।
कःस्वित् स वादिराजोऽप्यः शिंशुमारी महामतिः ॥"

"ऋक्संहितायां ब्रह्माण्डपुराणादिषु कीर्तितः ।
लातव्यो वैदिकाचार्यो वादिराजो न संशयः ॥"
– इति प्रमाणिकाग्रेसराः श्रीजम्बुखण्डीवादिराजाचार्याः

ಧರ್ಮಸಂಹಿತಾ ಎಂಬ ಗ್ರಂಥದಲ್ಲಿ-- ಸ್ವಾಯವಃ = ಭಾವಿವಾಯುಗಳಾದವರೂ ಬ್ರಹ್ಮಶಬ್ದವಾಚ್ಯರೂ, ಮಹಾಮತಿಗಳೂ, ಆಪ್ಯರು ಎಂದರೆ ಅಂಡೋದಕದಲ್ಲಿದ್ದ

ಶ್ರೀಹರ್ಯಾಜ್ಞೆಯಿಂದ ಸಕಲಜೀವರಲ್ಲಿ ಶ್ವಾಸನಿಯಾಮಕರೂ, ಶಿಂಶುಮಾರಿಯೂ ಆದ ಲಾತವ್ಯಾಚಾರ್ಯರ ಅವತಾರರಾದ ಶ್ರೀವಾದಿರಾಜರು ಶ್ರೀರುಕ್ಮಿಣೀಪತ್ರಸೇವೆ-ಯನ್ನು ಮಾಡಿದರು.

तच्चोक्तं नारायणसंहितायाम् –

"यो गोपथश्रुतौ गोत्रो लातव्य इति विश्रुतः ।
स एव ब्रह्मणः पुत्रो वादिराजो महामतिः ॥
ओङ्कारवाच्यो लातव्यो यजमानो महान् कविः ।
राजा श्रीवादिराजोऽप्यो ह्यैतरेयश्रुतौ श्रुतः ॥
राजा भोजो विराङ्गोत्रो वादीशो ब्राह्मणः स्वराट् ।
ब्रह्मा लातव्य इत्यादिशब्दैः संस्तूयते स्फुटम् ॥" इति ।

''ಯಾವ ಮಹಾಮತಿಗಳಾದ ಲಾತವ್ಯರು ಗೋತ್ರಶಬ್ದವಾಚ್ಯರು ಎಂದು ಗೋಪಥಶ್ರುತಿಯಲ್ಲಿ ಕೀರ್ತಿತರಾಗಿದ್ದಾರೋ ಅವರೇ ಬ್ರಹ್ಮನ ಪುತ್ರರಾದ ವಾದಿ-ರಾಜರು. ಐತರೇಯಬ್ರಾಹ್ಮಣದಲ್ಲಿ ಅವರೇ ಓಂಕಾರಶಬ್ದವಾಚ್ಯರು, ಯಜಮಾನರು, ಕವೀಶ್ವರರು, ರಾಜರು, ಅಪ್ಯರು ಎಂದು ಕೊಂಡಾಡಲ್ಪಟ್ಟಿದ್ದಾರೆಂಬುದು ಪ್ರಸಿದ್ಧ. ಅವರು ರಾಜ, ಭೋಜ, ವಿರಾಡ್, ಗೋತ್ರ, ವಾದೀಶ, ಬ್ರಾಹ್ಮಣ, ಸ್ವರಾಟ್, ಬ್ರಹ್ಮ, ಲಾತವ್ಯ ಎಂಬ ನಾಮಧೇಯಗಳಿಂದಲೂ ಚೆನ್ನಾಗಿ (ಸ್ಫುಟವಾಗಿ) ಸ್ತೂಯ-ಮಾನರಾಗಿದ್ದಾರೆ'' ಎಂದು ನಾರಾಯಣಸಂಹಿತಾ ಎಂಬ ಗ್ರಂಥದಲ್ಲಿದೆ.

तथा च पुनः नारायणोदितपञ्चरात्रवचनम् -

"योऽसौ हंसः पञ्चविंशब्राह्मणादिषु विश्रुतः ।
लतुः स एव लातव्यो वादिराजः सुरेश्वरः ॥" इति ।

ಶ್ರೀನಾರಾಯಣೋದಿತ ಪಂಚರಾತ್ರವಚನವು ಶ್ರೀವೃಂದಾವನಾಚಾರ್ಯರಿಂದಲೂ ಶ್ರೀಕಾಶೀರಾಘವೇಂದ್ರಾಚಾರ್ಯರಿಂದಲೂ ಸಮುದ್ಧೃತವಾಗಿದೆ ಎಂದು ಶಿಷ್ಟಶ್ರೇಷ್ಠ-ರಾದ ಶ್ರೀ 1008 ಶ್ರೀವಿಶ್ವೋತ್ತಮತೀರ್ಥಶ್ರೀಪಾದರ ಪರಮಾಜ್ಞೆ. ಅರ್ಥಾತ್ 'ಲತು ಶಬ್ದವಾಚ್ಯರೇ ಲಾತವ್ಯರು; ಇವರು ಬ್ರಹ್ಮಪದಯೋಗ್ಯರಾದ ಕಾರಣ ಹಂಸಶಬ್ದ-ವಾಚ್ಯರು. ಇವರೇ ಸುರೇಶ್ವರರಾದ ಶ್ರೀವಾದಿರಾಜರು' ಎಂದು ಶ್ರೀನಾರಾಯಣೋ-ದಿತಪಂಚರಾತ್ರದಲ್ಲಿದೆ. ಪುನಃ 'ಲಾತವ್ಯರು ಎಂದರೆ ಲತುವಂಶಜರು' ಅಥವಾ

'ಸ್ವಾರ್ಥೇಽಣ್, ಲತುರೇವ ಲಾತವ್ಯಃ' ಎಂದು ತಿಳಿಯಬೇಕು. (ಲತುಃ = ಶ್ರೀಹಯಗ್ರೀವಾತ್ ಸರ್ವಾಃ ಸದ್ವಿದ್ಯಾ ಲಾತಿ ಗೃಹ್ಣಾತೀತಿ 'ಲಃ', ಪುನಸ್ತಾಃ ಸದ್ವಿದ್ಯಾಃ ಶ್ರೀಹಯಗ್ರೀವಾಜ್ಞಯಾ ಸಪತ್ನೀಕೇಷು ಗರುಡಶೇಷರುದ್ರೇಂದ್ರಾದಿಸರ್ವದೇವೇಷು, ಯೋಗ್ಯೇಷು ಸರ್ವೇಷು ಚ ತನೋತಿ ವಿಸ್ತಾರಯತೀತಿ 'ತುಃ' । 'ಲಾತಿ ತನೋತೀತಿ ಲತುಃ' ಇತಿ ಶ್ರೌತಃ ಪ್ರಯೋಗಃ । ಲತುರೇವ ಲಾತವ್ಯಃ, ಸ್ವಾರ್ಥೇಽಣ್) । ಷಡ್ವಿಂಶಬ್ರಾಹ್ಮಣ(4/7) ತಾಂಡ್ಯಮಹಾಬ್ರಾಹ್ಮಣ (8/6/8)[1] ಕೂಶಾಂಬಸ್ವಾಯವನ-ಪೈತೃಕನಾಮಧೇಯರು 'ಲಾತವ್ಯರು' ಎಂದಿದೆ. 'ಕೂಶಾಂಬ-ಸ್ವಾಯವ-ಲಾತವ್ಯರು' ಎಂದು ಪಂಚವಿಂಶಬ್ರಾಹ್ಮಣದಲ್ಲಿ ಒಬ್ಬ ಪುರೋಹಿತನ ರೂಪದಲ್ಲಿ ಲಾತವ್ಯರ ಸಮುಲ್ಲೇಖವಿದೆ[2]. ನಾಮಧೇಯದ ಅರ್ಥವನ್ನು 'ಲಾತವ್ಯಗೋತ್ರೀಯ-ಸ್ವಾಯು-

---

1. ತಾಂಡ್ಯಬ್ರಾಹ್ಮಣವು ಸಾಮವೇದೀಯಬ್ರಾಹ್ಮಣಗಳಲ್ಲಿ ಪ್ರಧಾನವಾದುದು. 'ತಾಂಡಿ'ಶಾಖೆಗೆ ಸೇರಿರುವುದರಿಂದ ಈ ಬ್ರಾಹ್ಮಣಕ್ಕೆ 'ತಾಂಡ್ಯಬ್ರಾಹ್ಮಣ' ಎಂದು ಶಿಷ್ಟವೈದಿಕಮಂಡಲಿಯಲ್ಲಿ ನಾಮಧೇಯವು ಬಂದಿದೆ. ಇದರಲ್ಲಿ ಇಪ್ಪತ್ತೈದು(25) ಅಧ್ಯಾಯಗಳಿರುವುದರಿಂದ ಈ ತಾಂಡ್ಯ-ಬ್ರಾಹ್ಮಣಕ್ಕೆ 'ಪಂಚವಿಂಶಬ್ರಾಹ್ಮಣ' ಎಂಬ ಹೆಸರೂ ಇದೆ).

2. ಕೆಲವು ಪ್ರಾಚೀನ ತಾಂಡ್ಯಮಹಾಬ್ರಾಹ್ಮಣದ ಹಸ್ತಲಿಖಿತಪ್ರತಿಗಳಲ್ಲಿ (ಆಂಧ್ರಪ್ರದೇಶದ ತಾಳಪತ್ರಗಳಲ್ಲಿಯೂ ಸಹ) "एतद्ध स्म वा आह कूशाम्बः स्वायवो ब्रह्मा लातव्यः कंस्विदद्य शिंशुमारी यज्ञपथेऽप्यस्तारिष्यति" ಎಂದು ಪಾಠ ಉಪಲಬ್ಧವಿದೆ. ಮತ್ತೆ ಕೆಲವು ಹಸ್ತಲಿಖಿತ ಹಾಗೂ ಮುದ್ರಿತಪ್ರತಿಗಳಲ್ಲಿ "शिशुमारी यज्ञपथेऽप्यस्ता गरिष्यति" ಎಂಬ ಪಾಠವೂ (ತಾಂಡ್ಯಮಹಾಬ್ರಾಹ್ಮಣದ ಪಂಚವಿಂಶಬ್ರಾಹ್ಮಣ-8/6/8ದಲ್ಲಿ) ಇದೆ. ಈ ಮಂತ್ರಕ್ಕೆ ಶ್ರೀಸಾಯಣಾಚಾರ್ಯರು -

एतद्ध स्माह वक्ष्यमाणमिदमुवाच खलु आहेत्यस्य भूतकालसम्बन्धज्ञापनार्थं स्मेति प्रयोगः, क आह कूशाम्ब एतन्नामा आचार्यः स्वायवः स्वायोः पुत्रः ब्रह्मा श्रुतादिना परिवृढो लातव्य एतद्गोत्रसम्बन्धकथनमेतदिति उक्तमर्थं विवृणोति, अद्यास्मिन् दिने कंस्वित् कं वा शिशुं शिशुमारी यज्ञपथेऽप्यस्ता प्रक्षिप्ता सती गरिष्यतीति" ಎಂದು ಭಾಷ್ಯವನ್ನು ಬರೆದಿರುತ್ತಾರೆ. ಇದು ಲೌಕಿಕಾರ್ಥವುಳ್ಳದ್ದು.

ಆದರೆ ''ಶಿಶುಮಾರೀ ಶಿಂಶುಮಾರೀ ಭವತಿ'' ಎಂದು ಶ್ರುತ್ಯರ್ಥವಿದರಾದ ಮಂತ್ರಭಾಷ್ಯಕಾರರು ವ್ಯತ್ಯಯವನ್ನು ಸಮಾಶ್ರಯಿಸಿ ಹೇಳುವರು. 'ಅಪ್ಯಃ ತಾರಿಷ್ಯತಿ' ಎಂದು ಪದಚ್ಛೇದ ಮಾಡಿ ಕೆಲವರು ವೇದಜ್ಞರು ಪಠಿಸುವರು. ಇಲ್ಲಿ ಲಾತವ್ಯರಾದ ಶ್ರೀವಾದಿರಾಜರನ್ನು ಗ್ರಹಿಸಬೇಕು. ಏಕೆಂದರೆ ''ಶಿಂಶುಮಾರಂ ಸಮಾಸಾದ್ಯ ಕಂಸಮಾರೇಣ ಚಾದೃತಃ । ಸಂಸರಾಮಿ ಪುನರ್ನಾಹಮ್...'' ಎಂದು ಸ್ವಾಪ್ನವೃಂದಾವನಾಖ್ಯಾನದಲ್ಲಿ ಶ್ರೀಸೋದೇ ಗುರುರಾಜರ ಅಪ್ಪಣೆ ಇದೆ. (ಲತುಃ ಲಾತವ್ಯಃ ಸ ಏವ ಶಿಂಶುಮಾರೀ ಶ್ರೀವಾದಿರಾಜಃ).

ಪುತ್ರ-ಕೂಶಾಂಬನು' ಎಂದು ತಿಳಿಯಬೇಕು. ಶ್ರೀನಾರಾಯಣೋದಿತಪಂಚರಾತ್ರ-ವಚನಾನುಸಾರ ವಿವಕ್ಷಾಭೇದದಿಂದ ಪಂಚವಿಂಶ(ತಾಂಡ್ಯ)ಬ್ರಾಹ್ಮಣವಚನವು. ಪುನಃ ಷಡ್ವಿಂಶಬ್ರಾಹ್ಮಣವಚನವನ್ನು ಶ್ರೀವಾದಿರಾಜಪರತಯಾ ಸ್ಫುಟವಾಗಿ ತಿಳಿಯಬೇಕು.

तथा च प्रकाशसंहितावचनम् –
"यो गोपथश्रौतेन गोत्रेति परिकीर्तितः ।
तं भजामि वादीशं समस्तजीवसाधकम् ॥" इति ।
प्रामाणिकाग्रेसरैः श्रीकाशीराघवेन्द्राचार्यैः समुद्धृतम्

ಶ್ರೀಸಾಯಣಾಚಾರ್ಯರು ''ಏಷಾ ವೈ ಶಿಶುಮಾರೀ ಯಜ್ಞಪಥೇऽಪ್ಯಸ್ತಾ ಯಜ್ಞಾಯಜ್ಞೀಯಂ ಯದ್ಗಿರಾಗಿರೇತ್ಯಾತ್ಮಾನಂ ತದುದ್ಗಾತಾ ಗಿರತಿ'' ಎಂಬ ತಾಂಡ್ಯಮಹಾಬ್ರಾಹ್ಮಣವಚನವನ್ನು (8/6/9) ''ಯಜ್ಞಾಯಜ್ಞೀಯಂ ಸಾಮೇತಿ ಯತ್ ಏಷೈವ ಶಿಶುಮಾರೀ ಶಿಶುವತ್ ಪ್ರಯೋಗಾನಭಿಜ್ಞಾನಾಂ ಘಾತಿನೀ ಯಜ್ಞಪಥೇ ಯಜ್ಞಸ್ಯ ಮಾರ್ಗೇ ಔದ್ಗಾತ್ರರೂಪೇ ಅಪ್ಯಸ್ತಾ ಅಭಿಪ್ರಾಸ್ತಾ ತಥಾ ಸತಿ ಯತ್ ಗಿರಾಗಿರೇತಿ ಬ್ರೂಯಾದುದ್ಗಾತಾ ತೇನಾತ್ಮಾನಮೇವ ಗಿರತಿ'' ಎಂದು ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ 'ಶಿಶುಮಾರೀ' ಎಂಬ ಪಾಠವು ಕೇವಲ ಲೌಕಿಕಾರ್ಥವನ್ನು ಹೇಳುತ್ತದೆ.

ಆದರೆ ಶ್ರೀವಾದಿರಾಜರು ವೃಂದಾವನಾಖ್ಯಾನದಲ್ಲಿ ಅಲೌಕಿಕವಾದ ಶಿಂಶುಮಾರೀ ಎಂಬ ಪಾಠವನ್ನು ಸಮಾಶ್ರಯಿಸಿ ಅವರ ಲಾತವ್ಯಸ್ವರೂಪವನ್ನು ಪ್ರಕಟಿಸಿ ಜಗತ್ತಿಗೆ ಉಪದೇಶ ಮಾಡಿದರು. ಇಲ್ಲಿ ಶ್ರುತ್ಯರ್ಥವನ್ನು ವ್ಯತ್ಯಯಸಿದ್ಧಾಂತದಿಂದ ಅವಗತ ಮಾಡಿಕೊಂಡರೆ ಸಂಶಯ ಪರಿಹಾರವಾಗುತ್ತದೆ.

ಈ ಮೇಲಿನ ವಿಚಾರಗಳಡಿಯಲ್ಲಿ ಚಿಂತನೆ ಮಾಡಿದಾಗ ಈ ತಾಂಡ್ಯಮಹಾಬ್ರಾಹ್ಮಣದ ವಚನದ ತಾತ್ಪರ್ಯವು ಹೀಗಿದೆ -- ''ಕೂಶಾಂಬನಾಮಕನು ಸ್ಪಷ್ಟವಾಗಿ ಈ ವಿಧವಾಗಿ ಪ್ರಕಟಿಸುತ್ತಾನೆ. ಭಾವಿಮುಖ್ಯಪ್ರಾಣರೂ, ಶ್ವಾಸನಿಯಾಮಕರೂ, ಬ್ರಹ್ಮಶಬ್ದವಾಚ್ಯರೂ, (ಲತುಶಬ್ದವಾಚ್ಯರೂ), ಲಾತವ್ಯಶಬ್ದವಾಚ್ಯರೂ ಆದ ಶ್ರೀವಾದಿರಾಜರು ಶಿಂಶುಮಾರಿಯಾಗಿ ಅಂದರೆ ಶಿಂಶುಮಾರ ಮೂರ್ತಿಯನ್ನು ನಿರಂತರ ಧ್ಯಾನಮಾಡುವವರಾಗಿ, ಯಜ್ಞನಾಮಕಶ್ರೀಕೃಷ್ಣನ ಪತ್ನೀವಿಷಯದಲ್ಲಿ ರುಕ್ಮಿಣೀಪತ್ರ(ವಾಹಕ)ಸೇವಾಧರ್ಮವನ್ನು ನಿರ್ವಹಿಸಿ ಕೃತಾರ್ಥರಾಗಿ ಸಂಸಾರತರಣೆಯನ್ನು ಸ್ವಯಂ ಮಾಡಿ ಭಕ್ತರನ್ನೂ ಸಹ ಸಂಸಾರತರಣವನ್ನು ಮಾಡಿಸುವರು' ಎಂದು ತಿಳಿಯಬೇಕು.

''ಯಸ್ಮಾತ್ ವಾಕ್‌ಪ್ರಾಣೌ ಉದ್ಗೀಥಸ್ಯ ಉದ್ಗಾತಾರೌ ತಸ್ಮಾದೇವ ಇದಾನೀಮಪಿ ಉದ್ಗಾತಾ ಋತ್ವಿಕ್ ಆದಿತ್ಯಸ್ಥ ಹರೇರ್ಗಾತಾ'' ಎಂದು ಛಾಂದೋಗ್ಯ ಷಷ್ಠಖಂಡದಲ್ಲಿದೆ. ಉದ್ಗಾತೃತ್ವ ಎಂಬುದು ಮುಖ್ಯವಾಗಿ ವಾಯುಪದಯೋಗ್ಯರಿಗೆ ಮಾತ್ರ. ಅರ್ಥಾತ್ ಉದ್ಗಾತೃತ್ವಲಿಂಗವು ಶ್ರೀವಾದಿರಾಜರಲ್ಲೂ ಮುಖ್ಯತಯಾ ಇರುವುದರಿಂದ ಅವರ ಋಜುತ್ವವು ಇಲ್ಲಿ ಸೂಚಿತವಾಗುತ್ತದೆ.

ಪ್ರಾಮಾಣಿಕಾಗ್ರೇಸರರಾದ ಶ್ರೀಕಾಶೀರಾಘವೇಂದ್ರಾಚಾರ್ಯರಿಂದ ಸಮುದ್ಧೃತವಾದ ಪ್ರಕಾಶಸಂಹಿತಾವಚನದಲ್ಲಿ "ಯಾರು ಗೋಪಥಶ್ರುತಿಯಲ್ಲಿ ಗೋತ್ರ ಎಂದು ವಿಧವಿಧವಾಗಿ ಸ್ತೋತ್ರಮಾಡಲ್ಪಟ್ಟಿದ್ದಾರೋ ಅಂತಹ ಸಮಸ್ತಜೀವಸಾಧಕರಾದ ವಾದಿರಾಜರನ್ನು ಭಜಿಸುತ್ತೇನೆ" ಎಂಬ ಪ್ರಾರ್ಥನೆಯು ಕಾಣಬರುತ್ತದೆ. ಆ ಗೋಪಥಬ್ರಾಹ್ಮಣವಾಕ್ಯವಾದರೋ ಕೆಳಕಂಡಂತಿದೆ.

तथा हि गोपथब्राह्मणम् (१/१/२५) –

"तस्माद् ब्राह्मणवचनमादर्तव्यम्, यथा लातव्यो गोत्रो ब्रह्मणः पुत्रः ॥" इति ।

तथा च ऐतरेयब्राह्मणम् (७/३/१८) –

"तस्माद् यो राजा विजिती स्याद् अप्ययजमान आख्यापयेतैवैच्छौनश्येपमाख्यानं नहास्मिन्नल्पं च नैनः परिशिष्यते ॥" इति ।

तथा हि ऋक् –

"अग्रेगो राजाऽप्यस्तविष्यते ॥" इति । (अप्यः अप्सु अण्डोदके स्थितः संस्कृतश्च – श्वासनियामकः श्रीवादिराज इत्यर्थः)

तच्चोक्तं श्रीलक्ष्मीसंहितायाम् –

"ओङ्कारवाच्यो लातव्यो गोत्रोऽसौ ब्राह्मणः स्वराट् ।
सर्वज्ञो वादिराजेन्द्रो विश्रुतः प्रणवश्रुतौ ॥" इति ।

तथा हि प्रणवोपनिषत् –

"ओङ्कारस्योत्पत्तिं विप्रो यो न जानाति तत्पुनरुपनयनं तस्माद् ब्राह्मणवचनमादर्तव्यम् । यथा लातव्यो गोत्रो ब्राह्मणः । पुत्रो गायत्रं छन्दः शुक्लो वर्णः । पुंसो वत्सो रुद्रो देवता ओङ्कारो वेदानाम्, उत्तरोपनिषदं व्याख्यास्यामः ॥" इति ।

तच्चोक्तं पुनः प्रकाशसंहितायाम् –

"द्वात्रिंशल्लक्षणोपेतो विष्णुतत्वोपदेशकः ।
श्रीमन्मध्वमतोद्धर्ता बळित्थादिश्रुतौ श्रुतः ॥
साधको विष्णुकार्याणाम् ऋजुस्थो हि सुरेश्वरः ।
स्वाप्नवृन्दावनाख्यानकर्ता कृष्णप्रसादभाक् ॥
स्वप्नोऽयं ब्रह्मणः पुत्रः प्रकृतौ समजायत ।
त्रिगुणात्मासमुद्दिष्टः प्रायः सत्वात्मकस्तथा ॥
आतू न इन्द्रसूक्ते यो विश्रुतो भाविपद्मभूः ।
अगण्यपुण्यदो विद्वान् वेदानुक्तगुणोऽमृतः ॥
स्वायवो मानवो ब्रह्मा बाध्वो जीवघनो विभुः ।
शिंशुमारं समासाद्य कंसमारेण चादृतः ॥
व्याससेवारतो वाजिवक्त्रधारी जगद्गुरुः ।
भारतीपतिवद्भाति ब्राह्मणो हंसवाहनः ॥
लक्षालङ्कारकर्ता श्रीहरेः प्रियतमो महान् ।
लिङ्गाल्लातव्यनामर्जुः सर्वजीवनियामकः ॥
लातव्यः श्रीहयग्रीवविशिष्टप्रतिमा महान् ।
भाविब्रह्मा वादिराजश्चक्रे युक्तितिलोत्तमाम् ॥
अग्निद्योतन एवाप्यः सदा हंसरहस्यकृत् ।
हंसः श्रीवादिराजोऽसौ रुक्मिणीकृष्णसेवकः ॥
यथा देवौ ब्रह्मवायू अन्नप्राणाभिमानिनौ ।
लातव्यस्तु तथा नित्यं वर्तते जीवसाधकः ॥" इति ।

ಪ್ರಕಾಶಸಂಹಿತೆಯಲ್ಲಿ ಶ್ರೀವಾದಿರಾಜರ ಅವತಾರಕಾರ್ಯ, ಗುಣಗಳನ್ನು -

'ಮೂವತ್ತೆರಡು ಲಕ್ಷಣಗಳುಳ್ಳ ದಿವ್ಯದೇಹವುಳ್ಳವರು, ವಿಷ್ಣುತತ್ವೋಪದೇಶಕರು, ಶ್ರೀಮನ್ಮಧ್ವಮತವನ್ನು ಉದ್ಧಾರಮಾಡುವವರು, ಬಳಿತ್ಥಾದಿಸೂಕ್ತಪ್ರತಿಪಾದ್ಯರು, ಶ್ರೀವಿಷ್ಣುಕಾರ್ಯಗಳ ಸಾಧಕರು, ಋಜುಗಣಸ್ಥರು, ಸುರೇಶ್ವರರು, ಸ್ವಾಪ್ನವೃಂದಾವನಾಖ್ಯಾನಾದಿಕರ್ತರು, ಶ್ರೀಕೃಷ್ಣಪ್ರಸಾದಪಾತ್ರರು, ಸ್ವಪ್ನಶಬ್ದವಾಚ್ಯರು, ಭಾವಿಬ್ರಹ್ಮರು,

ಪ್ರಕೃತಿಶಬ್ದವಾಚ್ಯಳಾದ ಶ್ರೀದೇವಿಯ ಸುತರು, ತ್ರಿಗುಣಾತ್ಮಕರು, ಪ್ರಾಯಃ ಸತ್ವಾತ್ಮಕರು, 'ಆತೂ ನ ಇಂದ್ರ' ಎಂಬ ಋಙ್ಮಂತ್ರದಲ್ಲಿ ಪ್ರತಿಪಾದ್ಯರು, ಭಾವಿಬ್ರಹ್ಮರು, ಅಗಣ್ಯಪುಣ್ಯದನು, ವಿದ್ವಾಂಸರು, ವೇದಾನುಕ್ತಗುಣವುಳ್ಳವರು, ಅಮೃತರು, ಸ್ವಾಯವರು, ಮಾನವಶಬ್ದೋದಿತರು, ಬ್ರಹ್ಮಶಬ್ದವಾಚ್ಯರು, ಬಾಧ್ವರು (ಸಂಸಾರ-ಬಾಧಿತರಿಂದ ಪ್ರಾಪ್ಯರು ಅಂದರೆ ಸ್ತೋತ್ರಮಾಡಲ್ಪಡತಕ್ಕವರು), ಜೀವಘನರು, ವಿಭುವು, ಶಿಂಶುಮಾರಮೂರ್ತಿಯನ್ನು ಧ್ಯಾನಮಾಡುತ್ತಾ ರುಕ್ಮಿಣೀಪತ್ರಸೇವೆಯನ್ನು ಮಾಡಿ ಶ್ರೀಕೃಷ್ಣನಿಂದ ಅನುಗ್ರಹೀತರಾದವರು, ನಿರಂತರ ಶ್ರೀವೇದವ್ಯಾಸಸೇವಾ-ನಿರತರು, ವಾಜಿವಕ್ತ್ರಧಾರಿಯು, ಜಗದ್ಗುರುಗಳ ಪದದಲ್ಲಿರುವವರು, ಭಾರತೀ-ಪತಿಯಂತೆ ವಿರಾಜಮಾನರಾಗಿರುವ ಭಾವಿಭಾರತೀಪತಿಯು, ಬ್ರಾಹ್ಮಣರು (ನಿರಂತರಂ ಬ್ರಹ್ಮ = ವೇದಾನ್ ಅಣತಿ ಸಮುಚ್ಚಾರಯತೀತಿ ಬ್ರಾಹ್ಮಣಃ) ಹಂಸವಾಹನರು, ಶ್ರೀವ್ಯಾಸಾಜ್ಞೆಯಿಂದ ಭಾರತಕ್ಕೆ ಲಕ್ಷಾಲಂಕಾರಕರ್ತರು, ಶ್ರೀಹರಿಗೆ ಪ್ರಿಯತಮರು, ಮಹತ್ತತ್ತ್ವಾಭಿಮಾನಿಗಳು, ಲಾತವ್ಯನಾಮಕ ಋಜುದೇವತೆಗಳು, ಸರ್ವಜೀವ-ನಿಯಾಮಕರು ಆದ ಶ್ರೀವಾದಿರಾಜರು ಶ್ರೀಹಯಗ್ರೀವದೇವರ ವಿಶಿಷ್ಟಪ್ರತಿಮರೂ, ಮಹಾತ್ಮರೂ ಆಗಿ ಯುಕ್ತಿಮಲ್ಲಿಕಾ ಎಂಬ ತಿಲೋತ್ತಮೆಯನ್ನು (ಮಾಯಾವಾದ, ಅದ್ವೈತ ಎಂಬ ಸುಂದೋಪಸುಂದರ ಸಂಹಾರಕ್ಕಾಗಿ) ಸೃಷ್ಟಿಸಿದರು. ಇವರೇ ಅಗ್ನಿ-ದ್ಯೋತನರು, ಅಪ್ಯರು, ನಿರಂತರ ಹಂಸಮಂತ್ರಜಪಮಾಡಿಸುವವರಾದ ಶ್ವಾಸನಿಯಾ-ಮಕರು. ಹಂಸಶಬ್ದವಾಚ್ಯರಾದ ಶ್ರೀವಾದಿರಾಜರು ಸದಾ ಶ್ರೀರುಕ್ಮಿಣೀಕೃಷ್ಣರ ಸೇವಕರು, ಯಾವರೀತಿಯಿಂದ ಬ್ರಹ್ಮವಾಯುಗಳು ಅನ್ನಪ್ರಾಣಾಭಿಮಾನಿಗಳಾಗಿರುವರೋ ಅದೇ ರೀತಿ ಲಾತವ್ಯರಾದ ಶ್ರೀವಾದಿರಾಜರು ನಿರಂತರ ಜೀವಸಾಧಕರಾಗಿರುವರು''. ಎಂದು ವರ್ಣಿಸಲಾಗಿದೆ. 'ಆ ತೂ ನ ಇಂದ್ರ' ಮಂತ್ರದ ಪೂರ್ಣಪಾಠ ಕೆಳಕಂಡಂತಿದೆ.

तथा हि ऋक् –(१/१०/११)

"आ तू न इन्द्र कौशिक मन्दसानः सुतं पिब ।
नव्यमायुः प्र सू तिर कृधी सहस्रसामृषिम् ॥" इति ।

तथा च पञ्चरात्रे वाणीपतिमुद्दिश्य श्रीनारायणवचनम् –

श्रीमन्मध्वमतं दिव्यं मद्भक्तेनोद्धृतं सुत ।
मत्सर्वोत्तमतामुक्त्वा युक्तिमालाभिरञ्जसा ॥

व्यासात्मना मया पूर्वं यदुक्तं सर्वमेव तत् ।
जगत्सत्यत्वादिकं च तात्पर्यविषयम् ऋते ॥
तत्समर्थितमेवादौ समर्थेन महात्मना ।
प्राप्य तत्र कृतार्थत्वं व्यर्थीकृत्य स दुर्मतम् ॥
मत्समीपमिहागन्ता वृन्ताद्यस्थीनि तस्य च ।
चक्रशङ्खाद्यायुधैश्चाथाङ्कितानि महात्मनः ॥
तस्मात् तन्मतमेवाग्र्यं ग्राह्यं सर्वबुधैरपि ।
प्राग्र्यं लोकमवाप्नोति तन्मते चाग्रहान्वितः ॥" इति ।

ಪಂಚರಾತ್ರೋಕ್ತವಾದ ಶ್ರೀನಾರಾಯಣದೇವರ ಬ್ರಹ್ಮದೇವರನ್ನು ಕುರಿತಾದ -

'ಹೇ ಸುತನೇ! ಶ್ರೀಮಧ್ವಮತವು ದಿವ್ಯವಾದುದು; ಅಂದರೆ ಜ್ಞಾನಮೋಕ್ಷಾದಿಫಲಪ್ರದವು. ನನ್ನ ಭಕ್ತನು, ಭಾವಿಮಧ್ವನೂ ಆದ ಶ್ರೀವಾದಿರಾಜತೀರ್ಥನಿಂದ ಬಹು ಸಮೀಚೀನವಾಗಿ ಬ್ರಹ್ಮತರ್ಕಗ್ರಂಥದ ಆಧಾರದಿಂದ ('ಸತ್ತರ್ಕರಸಿಕಾನಾಂ ಮುದೇ ಭವ' ಗುಣಸೌರಭ ಶ್ಲೋ 24), ಪುನಃ ಯುಕ್ತಿಮಾಲಾಭಿಃ ಅರ್ಥಾತ್ ಯುಕ್ತಿಮಲ್ಲಿಕಾಗ್ರಂಥವನ್ನು ನಿರ್ಮಾಣಮಾಡಿ, ವೇದಾದಿಸಚ್ಛಾಸ್ತ್ರಪ್ರಮಾಣಗಳಿಂದ ನನ್ನ ಸರ್ವೋತ್ತಮತ್ವವನ್ನು ಸಂಸ್ಥಾಪಿಸಿ ಶ್ರೀಮನ್ಮಧ್ವಮತವನ್ನು ಉದ್ಧರಿಸಿದನು. ವೇದವ್ಯಾಸಾತ್ಮಕನಾದ ನನ್ನಿಂದ ದ್ವಾಪರಯುಗದಲ್ಲಿ ಬ್ರಹ್ಮಸೂತ್ರ , ಭಾರತ, ಭಾಗವತ ಮಹಾಪುರಾಣಗಳಲ್ಲಿ ಪ್ರತಿಪಾದಿಸಲ್ಪಟ್ಟ ಪಂಚಭೇದ, ತಾರತಮ್ಯ , ಶ್ರೀವಿಷ್ಣುಸರ್ವೋತ್ತಮತ್ವ, ಪಾರಮಾರ್ಥಿಕಜಗತ್ಸತ್ಯತ್ವಾದಿಗಳನ್ನೂ, ಹಾಗೂ ವೇದಗಳು ಪಾರಮಾರ್ಥಿಕಸತ್ಯಗಳೆಂದೂ ಶ್ರೀಮಧ್ವಾಚಾರ್ಯರು ಬ್ರಹ್ಮಸೂತ್ರಭಾಷ್ಯ , ಅನುವ್ಯಾಖ್ಯಾನಾದಿ ಸರ್ವಮೂಲಗ್ರಂಥಗಳಲ್ಲಿ ಸಮರ್ಥಿಸಲ್ಪಟ್ಟಪ್ರಕಾರ ಸಂಸ್ಥಾಪಿಸಿ ದುರ್ಮತಗಳನ್ನು ನಿರಾಕರಿಸಿದನು. ಪುನಃ ಆತನು ಶ್ರೀಮಧ್ವಮತವನ್ನುದ್ಧರಿಸಿ ಬದರೀಕ್ಷೇತ್ರದಲ್ಲಿ ನನ್ನ ಸನ್ನಿಧಾನಕ್ಕೆ ಬಂದನು. ಅಂತಹ ಮಹಾತ್ಮನಾದ ವಾದಿರಾಜತೀರ್ಥನ ವೃಂತಾದ್ಯಸ್ಥಿಗಳು ಶಂಖಚಕ್ರಾದ್ಯಾಯುಧಚಿಹ್ನೆಗಳಿಂದ ಯುಕ್ತವಾಗಿವೆ. ಆದುದರಿಂದ ಸರ್ವಜ್ಞಾನಿಗಳಿಂದಲೂ ಶ್ರೇಷ್ಠನಾದ ಆತನ ಮತವು ಗ್ರಾಹ್ಯವಾದುದು. ಆ ಮತದಲ್ಲಿ ಆಸಕ್ತರಾದವರು ಶ್ರೇಷ್ಠವಾದ ಜೀವನ್ಮುಕ್ತಲೋಕಗಳನ್ನು ಹೊಂದುವರು'' ಎಂಬ ವಚನವನ್ನು ಶ್ರೀಮದ್ವಾದಿರಾಜಗುರುಸಾರ್ವಭೌಮರು ತಮ್ಮ ಸ್ವಾಪ್ನವೃಂದಾವನಾಖ್ಯಾನಗ್ರಂಥದಲ್ಲಿ (10/43-48) ಅಪ್ಪಣೆ ಕೊಟ್ಟಿದ್ದಾರೆ.

तच्चोक्तं व्योमसंहितायाम् –

"इन्द्रश्च सम्राड् वरुणश्च राजा चेति श्रुतौ श्रुतौ ।
श्रीमध्ववादिराजौ तौ व्यासशिष्यौ यतीश्वरौ ॥" इति ।

''ಇಂದ್ರಶ್ಚ ಸಮ್ರಾಟ್ ವರುಣಶ್ಚ ರಾಜಾ'' ಎಂಬ ಶುಕ್ಲಯಜುರ್ವೇದಶ್ರುತಿಯು (8/37) ಶ್ರೀಮಧ್ವದೇವರು ಮತ್ತು ಶ್ರೀವಾದಿರಾಜರು ಶ್ರೀವೇದವ್ಯಾಸಶಿಷ್ಯರಾದ ಯತೀಶ್ವರರು, ಜೀವೋತ್ತಮರು ಎಂದು ಪ್ರಕಟಿಸುತ್ತದೆ ಎಂಬ ವಿಷಯವನ್ನು ವ್ಯೋಮಸಂಹಿತಾಗ್ರಂಥದಲ್ಲಿ ಶ್ರೀಹಯಗ್ರೀವದೇವರು ಅಪ್ಪಣೆ ಕೊಟ್ಟಿದ್ದಾರೆ.

ಆ ಶ್ರುತಿಯ ಪೂರ್ಣಪಾಠ ಕೆಳಕಂಡಂತಿದೆ.

तथा हि वाजसनेयमाध्यन्दिनशुक्लयजुर्वेदश्रुतिः – (८/३७)

"इन्द्रश्च सम्राड् वरुणश्च राजा तौ ते भक्ष्यं चक्रतुरग्र एतम् ।
तयोरहमनु भक्ष्यं भक्ष्ययामि वाग्देवी जुषाणा सोमस्य तृप्यतु सह
प्राणेन स्वाहा ॥" इति ।

तच्चोक्तं तत्त्वसंहितायाम् –

"द्वात्रिंशल्लक्षणः सम्यग्युक्तो वायुत्वयोग्यकः ।
लातव्यो वादिराजोऽसौ हरेश्चूडामणिः पुमान् ॥" इति ।

ತತ್ವಸಂಹಿತಾ ಎಂಬ ಗ್ರಂಥದಲ್ಲಿ ''ಮೂವತ್ತೆರಡು ಲಕ್ಷಣಯುತ ದಿವ್ಯದೇಹ-ವನ್ನುಳ್ಳವರು, ವಾಯುತ್ವಯೋಗ್ಯರು, ಲಾತವ್ಯರೂ, ಪುಮಾನ್ ಶಬ್ದವಾಚ್ಯರೂ ಆದ ಈ ಶ್ರೀವಾದಿರಾಜರು ಭಾವಿಕಾಲದಲ್ಲಿ ಶ್ರೀಹರಿಯ ಚೂಡಾಮಣಿಯಾಗುವವರು'' ಎಂದು ಹೇಳಲ್ಪಟ್ಟಿದೆ.

तच्चोक्तं तत्वसङ्ख्याने –

"ततः कालान्तरे सोऽपि वादिराजो भविष्यति ।
यत्पृष्टं तन्मया प्रोक्तं नात्र कार्या विचारणा ॥" इति ।

ತತ್ವಸಂಖ್ಯಾನವೆಂಬ ಗ್ರಂಥದಲ್ಲಿ ''ಅನಂತರ ಕಾಲಾಂತರದಲ್ಲಿ ಅವರಾದರೋ ವಾದಿರಾಜರೆಂಬ ಅಭಿಧಾನವುಳ್ಳವರಾಗಿ ಲೋಕೋದ್ಧಾರ ಮಾಡುತ್ತಾರೆ. ಯಾವ

ಪ್ರಶ್ನೆಯನ್ನು ನೀನು ಕೇಳಿದೆಯೋ ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಇದರಲ್ಲಿ ಯಾವ ಸಂಶಯಲೇಶವೂ ಇಲ್ಲ'' ಎಂದಿದೆ.

तच्चोक्तं तन्त्रभागवते –

"कश्चिद् द्विजवरश्रेष्ठो रुक्मिणीपत्रवाहकः ।
ऊर्ध्वपुण्ड्रधरः शङ्खचक्राङ्कितभुजो मनुः ॥
जीवोत्तमो हयग्रीवमृत्तिकाभूषितालिकः ।
लातव्यो वादिराजोऽसौ भाविमध्वो महामतिः ॥
लातव्यपत्नी स्वाहा सा सर्वज्ञा भाविभारती ।
ब्रह्मणो दुहिता वेदरूपा शतपथे श्रुता ॥" इति ।

''ಶತಪಥಬ್ರಾಹ್ಮಣದಲ್ಲಿ ಭಾವಿಬ್ರಹ್ಮರು, ದ್ವಿಜವರಶ್ರೇಷ್ಠರು, ಊರ್ಧ್ವಪುಂಡ್ರಧರರೂ, ಮನುಶಬ್ದವಾಚ್ಯರು, ಶಂಖಚಕ್ರಾಂಕಿತಭುಜರೂ ಆದ ಇವರು ರುಕ್ಮಿಣೀಪತ್ರವಾಹಕರಾಗಿರುವರು. ಇವರು ಜೀವೋತ್ತಮರೂ, ಶ್ರೀಹಯಗ್ರೀವಮೃತ್ತಿಕಾಭೂಷಿತವಾದ ಲಲಾಟವುಳ್ಳವರೂ, ಭಾವಿಮಧ್ವರೂ, ಮಹಾಮತಿಗಳೂ, ಲಾತವ್ಯರೂ ಆದ ಶ್ರೀವಾದಿರಾಜರಾಗಿರುವರು. ಈ ಲಾತವ್ಯಾಚಾರ್ಯರ ಪತ್ನಿಯೇ ಸ್ವಾಹಾದೇವಿ (ಇವರ ಹೆಸರನ್ನೇ ಅಗ್ನಿಪತ್ನಿಯೂ ಇಟ್ಟುಕೊಂಡಿರುವರು). ಆಕೆಯು ಸರ್ವಜ್ಞಳೂ, ಭಾವಿಭಾರತೀದೇವಿಯೂ, ಶ್ರೀವಿಷ್ಣುವಿನ ಮಗಳೂ ಆಗಿರುವಳು'' ಎಂದು ಕೇಳಿಬರುತ್ತದೆ ಎಂಬ ಮಾತು ತಂತ್ರಭಾಗವತವೆಂಬ ಗ್ರಂಥದಲ್ಲಿ ಸ್ಪಷ್ಟವಾಗಿದೆ.

ಶತಪಥಬ್ರಾಹ್ಮಣಮಂತ್ರದ ಪಾಠ ಹೀಗಿದೆ -

* तथाहि शतपथब्राह्मणम् ()–

"स्वाहा वै सत्यसम्भूता ब्रह्मणो दुहिता ब्रह्मप्रकृता लातव्यपत्नी (लातव्यसगोत्रा) त्रीण्यक्षराण्येकं पदं त्रयो वर्णाः शुक्लः पक्षः सुवर्ण इति॥" इति।

* तथाहि पुनः षड्विंशब्राह्मणम् (५-७) --

"स्वाहा वै कुतः सम्भूता? कस्य दुहिता? केन प्रकृता? किंगोत्रा? कत्यक्षरा? कतिपदा? कतिमात्रा? कतिवर्णा? कत्युच्छ्वासा? किं चास्याः शरीरम्? कान्यङ्गानि? कानि लोमानि? कति शिरांसि? कति वा चक्षूंषि?

किमस्या आस्यम्? किं प्रावृता? कौ बाहू? कौ पादौ? क्व च स्थिता? किमधिष्ठाना? कथं च स्वाहां प्रति गृह्णासि? ब्रूहि स्वाहारूपं च दैवतं च॥१॥

स्वाहा वै सत्यसम्भूता । ब्रह्मणो दुहिता । ब्रह्मप्रकृता । लातव्य-सगोत्रा । त्रीण्यक्षराणि । एकं पदम् । त्रयोऽस्यै वर्णाः । शुक्लः पद्मः सुवर्ण इति । चत्वारोऽस्यै वेदाः शरीरम् । षडङ्गान्यङ्गानि । ओषधि-वनस्पतयो लोमानि । द्वे चास्याः शिरसी । एकं शिरोऽमावास्या द्वितीयं पौर्णमासी । चक्षुश्चन्द्रादित्यौ ।आज्यभागौ हुतम् । दक्षिणा प्रावृता । बृहद्रथन्तरम् । ऋग्यजुःसाम गतिः । सा स्वाहा । सा स्वधा । स वषट्कारः । सैषा देवेषु वषट्कारभूता प्रयुज्यते । पितृयज्ञेषु स्वधाभूता । शकटीमुखीं पृथिवीमन्तरिक्षेण विपर्येति । तस्या अग्निर्दैवतम् । ब्राह्मणो रूपम् । यत्कामास्ते जुहुमस्तन्नो अस्तु । वयं स्याम पतयो रयीणाम् । स्वाहेति ॥२॥

अत्र सायणभाष्यम् – स्वाहा सत्येनैव सम्भूता । ब्रह्मण एव दुहिता ब्रह्मणैव प्रकर्षेण कृता । लातव्येन ऋषिणा समानगोत्रा । तस्या अक्षराणि सकारवकार-हकारात्मकानि त्रीणि । पदमेकम् । एतावत्येवेति मन्तव्यम् । अस्यै अस्याः वर्णरूपाणि शुक्लः पद्मः - पद्मशब्देन पद्मवर्ण उपलक्ष्यते - सुवर्णः सुवर्णवर्णश्चेति त्रयः । अस्या चत्वार ऋगादयो वेदाः उछ्वासाः त एव तस्याः शरीरम् । अङ्गानि निरुक्तादीनि षड्वेदाङ्गानि । तान्येव तस्या अङ्गानि । ओषधिवनस्पतय एवास्या लोमानि । तथा अस्या द्वे शिरसी। तयोरेव प्रदर्शनम् । अमावास्यैकं शिरः। पौर्णमासि द्वितीयं शिरः। तत्रैव यागकरणात् । चन्द्रादित्यौ एव अस्याश्चक्षुः । चक्षुषी इत्यर्थः। आज्यभागाख्ये कर्मणी एव अस्या हुतं हवनस्थानम् । मुखमित्यर्थः। यागे या दक्षिणा सैव प्रावृतावरणं तस्याः। बृहद्रथन्तरं बृहद्रथ-न्तरसामनी एव बाहू इति शेषः। ऋग्यजुःसाम। ऋगादयस्त्रयो वेदा गतिः। पादा इत्यर्थः। एवंविधा या स्वाहा सैव स्वधा। नान्या। तथा सः वषट्कारः। सैषा स्वाहा देवेषु देवयज्ञेषु वषट्कारभूता सती प्रयुज्यते। सैव स्वधाभूता पितृयज्ञेषु प्रयुज्यते इत्याश्रयनिरूपणम् । शकटीमुखीं पृथिवीम् अधिष्ठाय अन्तरिक्षेण

(अन्तरिक्ष)मार्गेण विपर्यैति । स्वाहा सर्वं स्वर्गादिफलं प्राप्नोतीति (अर्थः) । तस्याः स्वाहाया अग्निर्देवतम् अग्निरेव देवता । रूपं ब्राह्मणः । तत्प्रधान्यात् । हे प्रजापते । त्वत्तोऽन्यः कश्चित् सर्वाणि भुवनानि परिभवितुं न शक्नोति । अतस्ते तुभ्यं वयं यत्कामा यत्फलं कामयमानाः जुहुम तत् फलं नोऽस्माकम् अस्तु ।किञ्च । वयं रयीणां धनानां पतयः स्याम भवेम । स्वाहेत्यनेन स्वाहायाः प्रजापतिपरिग्रहो दर्शितः ।

तस्यानु तृप्तिं तृप्यति प्रजया पशुभिरन्नाद्येन तेजसा ब्रह्मवर्चसेनेति ॥ ३ ॥ (इति षड्विंशब्राह्मणे पञ्चमाध्याये सप्तमः खण्डः)

अत्र सायणभाष्यम् -- तस्य स्वाहाकारपरिग्रहेण तृप्तस्य प्रजापतेः तृप्तिमनु यजमानः प्रजया पुत्रपौत्रादिकया पशुभिः गवादिभिः अन्नाद्येन तेजसा ब्रह्मवर्चसेन (ब्रह्मवर्चसं) वृत्तस्वाध्यायतेजः तेन, -- च तृप्यति । इतिशब्दोऽ-ध्यायपरिसमाप्तिद्योतनार्थः ।

ಇದರ ಅಭಿಪ್ರಾಯವೇನೆಂದರೆ, ತಂತ್ರಭಾಗವತಪ್ರಮಾಣಾನುಸಾರವಾಗಿ ಲಾತವ್ಯರ ಪತ್ನಿಯು ಸ್ವಾಹಾದೇವಿಯೆಂದು ತಿಳಿಯಬೇಕು. ಈ ಸ್ವಾಹಾದೇವಿಯ ಹೆಸರನ್ನೇ ಪ್ರಸಿದ್ಧ ಅಗ್ನಿಪತ್ನಿಯೂ ಇಟ್ಟುಕೊಂಡಳು.

* तथाहि ब्रह्मवैवर्ते चतुर्मुखवचनम् –

"व्याससेवारतो नित्यं वादिराजो ऋजुर्यतिः ।
श्रीमन्मध्वमतोद्धर्ता युक्तिमालाभिरञ्जसा ॥
दुर्वादीन् परिमथ्याशु मत्पदं यातुमर्हति ।
स्थापयिष्यति सच्छास्त्रं तेन क्षेमो भवेद्धि वः ॥"

"ನಿರಂತರ ಶ್ರೀವೇದವ್ಯಾಸಸೇವಾನಿರತರೂ, ಋಜುಗಣಸ್ಥರೂ, ಶ್ರೀಮಧ್ವ-ಮತೋದ್ಧಾರಕರಾದ ಯತಿಶ್ರೇಷ್ಠರೂ, ಭುವನಾದ್ಭುತಗ್ರಂಥವಾದ ಯುಕ್ತಿಮಲ್ಲಿಕಾ ಗ್ರಂಥಕರ್ತರೂ ಆದ ಶ್ರೀವಾದಿರಾಜರು ದುರ್ವಾದಿಗಳನ್ನು ಪರಿಮಥನಮಾಡಿ ನನ್ನ (ಅಂದರೆ ಬ್ರಹ್ಮದೇವರ) ಪದವಿಯನ್ನು ಹೊಂದುವರು. ಶ್ರೀಮಧ್ವಶಾಸ್ತ್ರವನ್ನು ಸ್ಥಾಪನೆ ಮಾಡಿ ಸಕಲರಿಗೂ ಕ್ಷೇಮವನ್ನುಂಟು ಮಾಡುವರು" ಎಂದು ಬ್ರಹ್ಮವೈವರ್ತ-ಪುರಾಣದಲ್ಲಿದೆ.

तच्चोक्तं ब्रह्माण्डपुराणे –

"रूप्यात्मकं पादपीठं धृत्वा स मुदितः प्रभुः ।
लिङ्गाकारशिला भूमावास्तेऽनन्तासनो हरिः ॥
ईदृशानन्तदेवस्य स्थाने तत्सेवनोत्सुकः ।
ज्ञानी मध्वो मातरिश्वा गुहासन्तं जगत्पतिम् ॥
आ समन्तात् पतित्वे तु मथ्नात्याम्नायसिन्धुना ।
हनुमद्भीममध्वाख्यास्त्रयो वायुसुता इमे ।
तं मध्वं मारुतं सर्वे परिवारतया सदा ॥
संसेवितुं सुरा भूमाववतेरुरिति श्रुतम् ।
ते तच्छिष्यतामाप्य तन्मतं भुव्यघोषयन् ।
तेषु मुख्यौ विष्णुतीर्थपद्मनाभाख्ययोगिनौ ॥
अत्यक्तदेहस्तत्राद्यो वर्तयिष्यति तन्मतम् ।
बदर्यां व्याससेवोत्को गुरोः प्रीत्यै पुनः कलौ ॥
तत्पूर्वमस्य वंशे तु(च) ऋजुस्थो हि सुरेश्वरः ।
वादिराजो यतिर्भूत्वा चैतद्विस्तारयिष्यति ॥" इति ।

(ಬ್ರಹ್ಮಾಂಡಪುರಾಣದ ಮೇಲಿನ ವಾಕ್ಯಗಳು ಪಾದ್ಮಪುರಾಣದಲ್ಲಿ ಮೊದಲಿನ ಮೂರು ಸಾಲುಗಳನ್ನು ಬಿಟ್ಟು ಕಂಡು ಬರುತ್ತವೆ.) ಭಾವಾರ್ಥ - ''ರೂಪ್ಯಾತ್ಮಕವಾದ ಪಾದಪೀಠವನ್ನು ಹೊಂದಿದ ಭಗವಂತನಾದ, ಅನಂತಾಸನನಾದ ಶ್ರೀಹರಿಯು ಲಿಂಗಾಕಾರವಾದ ಶಿಲೆಯೊಳಗೆ ಸನ್ನಿಹಿತನಾಗಿ ಈ ಭೂಮಿಯಲ್ಲಿ (ರೂಪ್ಯಪೀಠ-ಪುರದಲ್ಲಿ) ಇರುವನು. ಅಂತಹ ಅನಂತನಾಮಕಪರಮಾತ್ಮನ ಸೇವೆಗಾಗಿ ಶ್ರೀಮಧ್ವ-ದೇವರು ಪಾಜಕದಲ್ಲಿ ಅವತಾರಮಾಡಿದರು. ಮಾತರಿಶ್ವರೂ, ಜ್ಞಾನಿಶ್ರೇಷ್ಠರೂ ಆದ ಶ್ರೀಮಧ್ವಾಚಾರ್ಯರು ವೇದಗಳಲ್ಲಿ ಪ್ರತಿಪಾದಿಸಲ್ಪಡುತ್ತಾರೆ. ಅವರು ಜಗತ್ಪತಿಯಾದ (ಸರ್ವಜೀವರ ಹೃದಯಗುಹೆಗಳಲ್ಲಿರುವ) ಶ್ರೀವಿಷ್ಣುವನ್ನು ಪ್ರತಿಪಾದಿಸುತ್ತಾರೆ. ಹನುಮಭೀಮಮಧ್ವರೆಂದು ಶ್ರೀವಾಯುದೇವರ ಮೂರು ಅವತಾರಗಳು. ಅಂತಹ ಶ್ರೀಮಧ್ವದೇವರನ್ನು ಸಂಸೇವಿಸಲು (ಪರಿವಾರತ್ವೇನ ಸೇವಿಸಲು) ದೇವತೆಗಳು ಅವತರಿಸಿದರೆಂದು ಪ್ರಸಿದ್ಧವಾಗಿದೆ. ಅವರಾದರೋ ಶ್ರೀಮಧ್ವಶಿಷ್ಯರಾಗಿ ಶ್ರೀಮಧ್ವ-ಮತವನ್ನು ಪ್ರಸಾರ ಮಾಡಿದರು. ಅವರಲ್ಲಿ ಮುಖ್ಯರು ಶ್ರೀವಿಷ್ಣುತೀರ್ಥರು ಮತ್ತು

ಶ್ರೀಪದ್ಮನಾಭತೀರ್ಥರು. ಇವರಲ್ಲಿ ಮೊದಲಿಗರಾದ ಶ್ರೀವಿಷ್ಣುತೀರ್ಥರು ಅತ್ಯಕ್ತ-ದೇಹವುಳ್ಳವರಾಗಿ (ಶರೀರವನ್ನು ತ್ಯಾಗಮಾಡದೆ) ಶ್ರೀಮಧ್ವಮತವನ್ನು ಪುನರು-ದ್ಧರಿಸುತ್ತಾರೆ. ಅಂತಹ ಋಜುಪುಂಗವರಾದ ಶ್ರೀವಿಷ್ಣುತೀರ್ಥರ ಸದ್ವಂಶದಲ್ಲಿ ಋಜು-ಗಣಸ್ಥರೂ, ಸುರೇಶ್ವರರೂ ಆದ ಶ್ರೀವಾದಿರಾಜತೀರ್ಥರು ಅವತರಿಸಿ ಶ್ರೀಮಧ್ವಮತ-ವನ್ನು ವಿಸ್ತಾರಗೊಳಿಸುತ್ತಾರೆ.'' ಎಂದು[1]

तथाहि श्रीसत्यपराक्रमतीर्थश्रीपादाः –

"ऋजुत्वेन सुनिर्णीतो वादिराजो जगद्गुरुः ।
सर्वदा रक्षको भूयादस्माकं धृततन्मृदाम् ॥" इति ।

ಶ್ರೀಸತ್ಯಪರಾಕ್ರಮತೀರ್ಥಶ್ರೀಪಾದರು 'ಋಜುಗಣಸ್ಥರು ಎಂದು ಶಾಸ್ತ್ರಗಳಿಂದ ನಿರ್ಣೀತರಾದ ಜಗದ್ಗುರುಗಳಾದ ಶ್ರೀವಾದಿರಾಜರು ಅವರ ಮೃತ್ತಿಕೆಯನ್ನು ಧರಿಸಿದ ನಮಗೆ ಸದಾ ರಕ್ಷಕರಾಗಿರಲಿ' ಎಂದು ಪ್ರಾರ್ಥಿಸಿದ್ದಾರೆ.

---

1. Śrī Vijayadāsaru, who was an incarnation of Bṛghumaharṣi, vindicated the context of Brahmāṇḍapurāṇa, which establishes the Ṛjutva of Sri Vadirajru, in his Śrīvādirājasuḷādi, as follows,

"भजनीय गैयुत बहुकालदि,
ऋजुगणपङ्क्तियोळगे कुळिता,
निजनिर्मलसुज्ञानध्यानदिन्द,
ज्ञानपक्कवाद मनवुळ्ळ,
सुजनशिरोमणि वादिराजनु ता
निजवागि बोम्माण्डपुराणसाधकदिन्द,
अजपद् सल्वदु लेशसंशय बेडि,
निज निज निजवेन्दु नित्यदि कोण्डाडि ॥

''ಭಜನೀಯಗೈಯುತ ಬಹುಕಾಲದಿ,
ಋಜುಪಂಕ್ತಿಯೊಳಗೆ ಕುಳಿತಾ, ನಿಜನಿರ್ಮಲ
ಸುಜ್ಞಾನ ಧ್ಯಾನದಿಂದ ಜ್ಞಾನಪಕ್ವವಾದ ಮನವುಳ್ಳ,
ಸುಜನಶಿರೋಮಣಿ ವಾದಿರಾಜನು ತಾ
ನಿಜವಾಗಿ ಬೊಮ್ಮಾಂಡಪುರಾಣಸಾಧಕದಿಂದ,
ಅಜಪದಿ ಸಲ್ವದು ಲೇಶ ಸಂಶಯ ಬೇಡಿ,
ನಿಜನಿಜ ನಿಜವೆಂದು ನಿತ್ಯದಿ ಕೊಂಡಾಡಿ ॥

तत्पुनः समुद्धृतं श्रीवृन्दावनाचार्यैः –

"श्रीमदानन्दतीर्थात्मभारतीशकृतस्य च ।
महाभारततात्पर्यनिर्णयस्य च वादिराट् ।
भावं प्रकाशयामास भविष्यद्भारतीपतिः ॥" इति ।

ಶ್ರೀವೃಂದಾವನಾಚಾರ್ಯರು ತಮ್ಮ ಹಸ್ತಲಿಖಿತ ಮಹಾಭಾರತತಾತ್ಪರ್ಯನಿರ್ಣಯಭಾವಪ್ರಕಾಶಿಕಾ ಗ್ರಂಥದಲ್ಲಿ ''ಭಾರತೀಪತಿಗಳಾದ ಶ್ರೀಮುಖ್ಯಪ್ರಾಣದೇವರ ಅವತಾರರಾದ ಶ್ರೀಮದಾನಂದತೀರ್ಥರಿಂದ ರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ಭಾವವನ್ನು ಭಾವಿಭಾರತೀಪತಿಗಳಾದ ಶ್ರೀಮದ್ವಾದಿರಾಜಗುರುಸಾರ್ವಭೌಮರು ಪ್ರಕಾಶಮಾಡಿದರು'' ಎಂದು ನಿರ್ಣಯನೀಡಿದ್ದಾರೆ.

अपि च –

"यश्चक्रे चक्रमीमांसां यश्चक्रे युक्तिमल्लिकाम् ।
यो प्राभञ्जन्यं भाविकल्पे प्राप्नोत्येव सुनिश्चितः ॥
यो रुक्मिणीशविजयं कृत्वा राज्ञे ददौ मुदा ।
यः पाखण्डिनोऽखण्डयत्तत्वं तस्मै स्वाप्नकृते नमः ॥" इति ।

ಶ್ರೀನಾರಾಯಣಾಚಾರ್ಯರು ತಮ್ಮ ಟಿಪ್ಪಣಿಯಲ್ಲಿ ''ಯಾರು ಚಕ್ರಮೀಮಾಂಸಾ ಗ್ರಂಥವನ್ನೂ, ಯುಕ್ತಿಮಲ್ಲಿಕೆಯನ್ನೂ ರಚಿಸಿದರೋ, ರುಕ್ಮಿಣೀಶವಿಜಯಮಹಾಕಾವ್ಯವನ್ನು ರಚಿಸಿ ರಾಜನಿಗೆ ನೀಡಿದರೋ, ದುಷ್ಟಮತಾನುಯಾಯಿಗಳಾದ ಪಾಖಂಡಿಗಳನ್ನು ನಿರಾಕರಿಸಿದರೋ, ಸ್ವಾಪ್ನವೃಂದಾವನಾಖ್ಯಾನಗ್ರಂಥವನ್ನು ನಿರ್ಮಾಣ ಮಾಡಿದರೋ ಅಂತಹ ಭಾವಿಕಲ್ಪದಲ್ಲಿ ಪ್ರಭಂಜನಪದವಿಯನ್ನು (ಮುಖ್ಯವಾಯುದೇವರ ಪದವಿಯನ್ನು) ನಿಶ್ಚಿತವಾಗಿ ಹೊಂದುವವರೋ ಅಂತಹ ಶ್ರೀವಾದಿರಾಜರಿಗೆ ನಮೋ ನಮಃ'' ಎಂದು ಸ್ಮರಿಸಿದ್ದಾರೆ[1].

तच्चोक्तं पुनः सद्भावे –

"ऋजवे त्वा साधवे त्वेति यजुर्वेदश्रुतौ श्रुतौ ।
श्रीमध्ववादिराजौ तौ हंसौ जीवोत्तमौ समौ ॥" इति ।

1. ಈ ವಿಷಯವು ಉಪಲಬ್ಧ ಪ್ರಾಚೀನಹಸ್ತಲಿಖಿತಪ್ರತಿಯಲ್ಲಿ ಕಂಡುಬರುತ್ತದೆ.

ಸದ್ಭಾವಗ್ರಂಥವಚನವೆಂದು ಶ್ರೀಸತ್ಯಧರ್ಮಶ್ರೀಮಚ್ಚರಣರಿಂದ ಉದ್ಧೃತವಾದ ಈ ವಾಕ್ಯದ[1] ಭಾವಾರ್ಥವು ಹೀಗಿದೆ - 'ಋಜವೇ ತ್ವಾ ಸಾಧವೇ ತ್ವಾ' ಎಂಬ ಶುಕ್ಲ-ಯಜುರ್ವೇದಶ್ರುತಿಯಿಂದ ಪ್ರತಿಪಾದ್ಯರಾದ ಶ್ರೀಮಧ್ವರು, ಶ್ರೀವಾದಿರಾಜರು ಹಂಸರೆಂದೂ, ಜೀವೋತ್ತಮರೆಂದೂ ಖ್ಯಾತರಾಗಿ ತಮ್ಮಲ್ಲಿ ಸಮಾನರಾಗಿದ್ದಾರೆ (ವಾಣೀಪತಿತ್ವವನ್ನು ಬಿಟ್ಟು, ಋಜೂನಾಂ ಸಮತ್ವೇನ ಪ್ರಮಿತತ್ವಾತ್ ಎಂದು ಶಾಸ್ತ್ರ-ವಚನ').

ಆ ಶುಕ್ಲಯಜುರ್ವೇದ ಶ್ರುತಿಯ ಪಾಠ ಹೀಗಿದೆ -

"ऋजवे त्वा साधवे त्वा सुक्षीत्यै त्वा । मखाय त्वा मखस्य त्वा शीर्ष्णे त्वा । मखाय त्वा मखस्य त्वा शीर्ष्णे त्वा । मखाय त्वा मखस्य त्वा शीर्ष्णे त्वा ।" इति । (३७/१०)

तच्चोक्तं पुनः प्रकाशसंहितायाम् –

"इन्द्रावरुणा युवं सूक्ते श्रुतौ सर्वसुरोत्तमौ ।
श्रीमध्ववादिराजौ तौ संवर्गौ जीवसाधकौ ॥" इति ।

''ಇಂದ್ರಾ ವರುಣಾ ಯುವಂ' ಎಂಬ ಋಕ್ಸೂಕ್ತದಲ್ಲಿ ಸರ್ವಸುರೋತ್ತಮರೂ, ಸಂವರ್ಗರೂ, ಜೀವಸಾಧಕರೂ ಆದ ಶ್ರೀಮಧ್ವಗುರುಗಳು, ಶ್ರೀವಾದಿರಾಜಗುರುಗಳು ಸ್ಫುಟವಾಗಿ ಕೀರ್ತಿಸಲ್ಪಟ್ಟಿರುವರು' ಎಂದು ಪ್ರಕಾಶಸಂಹಿತಾವಚನವು ವಿರಾಜಮಾನ-ವಾಗಿದೆ.

तथा हि ऋक् (७/८२/१) –

"इन्द्रा वरुणा युव मध्वराय नो विशे जनाय महि शर्म यच्छतम् ।
दीर्घप्रयज्युमति यो वनुष्यति वयं जयेम पृतनासु दूढ्यः ॥" इति ।

॥श्रीमध्वेशार्पणमस्तु॥

---

1. ಪ್ರಾಮಾಣಿಕಾಗ್ರೇಸರರಾದ ಶ್ರೀಕಾಶೀರಾಘವೇಂದ್ರಾಚಾರ್ಯರೂ ಸಹ ಈ ವಾಕ್ಯವು ಪ್ರಮಾಣ-ತಮವೆಂದು ಉದ್ಧರಿಸಿದ್ದಾರೆ.